ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೩, ಸಂಚಿಕೆ ೩, ಆಗಸ್ಟ್ ೨೦೧೫

ಶ್ರಾವಣ ಬಂತು!

ಮಾಯಾ ಚೌಕ - ಒಂದು ಕೌತುಕದ ವಿಷಯ

ಡಾ || ಸಿ. ವಿ. ಮಧುಸೂದನ

ಪುಟ ೨

ದೀಪದ ಕೆಳಗೆ - ಒಂದು ಕಥೆ

ವೈ. ಕೆ. ಸಂಧ್ಯಾ ಶರ್ಮ

ಪುಟ ೧೬

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಮಾಯಾ ಚೌಕ ... ಪು. ೨

ಚಿಲುಮೆಯ ಒಳಗೆ

ವಿಚಾರ ವಿಹಾರ ... ಪು. ೫

ರಾಂ ರಾಮ! ಹಾಸ್ಯ ... ಪು. ೬

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೯

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೦

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೧

ಕರ್ನಾಟಕದ ರಾಜವಂಶಗಳು ... ಪು. ೧೨

ಚಿಲುಮೆಯ ಒಳಗೆ

ಬ್ಯಾಗಾಯಣ – ಹಾಸ್ಯ ... ಪು. ೨೦

ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೨೨

ಕನ್ನಡದ ಒಂದು ಕಾಯಕಕ್ಕೆ ಮನವಿ

ಪುಟ ೧೯

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಮಾನವನ ಜೀವನವು ಹಲವಾರು ವರ್ಷಗಳಷ್ಟೇ. ಅಬ್ಬಬ್ಬ ಎಂದರೆ ನಮಗೆ ಎಷ್ಟು ಶತಾಯುಷಿಗಳು ಸಿಕ್ಕುವರು! ಇವೆಲ್ಲವು ನಮಗೆ ತಿಳಿದಿದೆ, ಈಗೊಂದು ಪ್ರಶ್ನೆ. ನಮ್ಮ ಜೀವನವನ್ನು ಸಂತೋಷದಿಂದ ಸಂಪೂರ್ಣವಾಗಿ ಆಸ್ವಾದಿಸುವ ಮನೋಭಾವವು ನಮ್ಮ ಬಳಿ ಇರುತ್ತದೆಯೇ? ಇದನ್ನು ನಾವೇ ನಮ್ಮನ್ನು ಪ್ರಶ್ನಿಸಿಕೊಂಡು ತಿಳಿದುಕೊಳ್ಳಬೇಕಷ್ಟೇ!

ಹಲವಾರು ಆದರ್ಶಗಳು, ನಂಬಿಕೆಗಳು, ಹಲವು ರೀತಿಯ ಜೀವನದ ಪರವಾಗಿ ನಾವು ನಿಲ್ಲುತ್ತೇವೆ ಅಥವಾ ಅನುಮೋದನೆಯನ್ನು ಮಾಡುತ್ತೇವೆ. ಅಂತಹ ನಮ್ಮ ನಿಲುವಲ್ಲಿ ಸತ್ಯವೆಷ್ಟು, ಹುಸಿ ಅದರ್ಶವಾದವೆಷ್ಟು ಎಂದು ನಮಗೆ ನಾವೇ ತಿಳಿದುಕೊಳ್ಳಬೇಕು. ಹೀಗೊಂದು ಉಕ್ತಿಯಿದೆ "ಮಾನವರು ಇತರ ಜನರ ನಂಬಿಕೆಗಳನ್ನು ಬಹಳ ಸುಲಭವಾಗಿ ಪ್ರಶ್ನಿಸುತ್ತಾರೆ. ಆದರೆ ತಮ್ಮ ನಂಬಿಕೆಗಳ ವಿಷಯ ಬಂದಾಗ, ಅದನ್ನು ಪ್ರಶ್ನಿಸುವುದಕ್ಕೆ ಆಸ್ಪದವೇ ಕೊಡುವುದಿಲ್ಲ, ಬದಲು ಅದರ ರಕ್ಷಣೆಯಲ್ಲಿ ತೊಡಗುತ್ತಾರೆ". ಇಂತಹ ಹೊರಗೊಂದು, ಒಳಗೊಂದು ವಿಷಯವಿಟ್ಟುಕೊಂಡು ಜೀವಿಸಿದರೆ ಅದು ಸುಖವನ್ನು ಕೊಡಲು ಸಾಧ್ಯವೇ?

"ಮಿಂಚಬೇಕೆಂದು ಬಲು ಜ್ಯೋತಿಗಳನು ಹಚ್ಚಿ ವಂಚನೆಯಿಂದಲಿ ಪೂಜೆ ಮಾಡುವುದು – ಉದಯ ವೈರಾಗ್ಯವಿದು" ಎಂದು ದಾಸರು ಹೇಳಿದರೂ, "ಒಳಗಣ ಕಪಟ ಹೊರಗಣ ಬಣ್ಣ, ಆ ತೊಡಿಗೆಯ ನಿನ್ನ ನೀನರಿ" ಎಂದು ವಚನಕಾರರು ಕೂಗಿ ಹೇಳಿದರೂ ಡಾಂಭಿಕತೆ ಹಾಗೆಯೇ ಉಳಿದಿರುವುದನ್ನು ನಾವು ನೋಡುತ್ತಲೇ ಇದ್ದೀವಿ. ಎಷ್ಟೇ ವೈಚಾರಿಕತೆಯಿಂದ ಮಾತನಾಡಿದರೂ, ನಾವು ಒಳಗಡೆಯೂ ಅಷ್ಟೇ ವಿಶಾಲ ಮನಸ್ಸಿನಿಂದ ಯೋಚಿಸುತ್ತೇವೆಯೇ ಎಂದು ನಾವು ಅರಿತುಕೊಳ್ಳಬೇಕಷ್ಟೇ. ನಮ್ಮ ಅರಿವಿನಿಂದ ಮಾತ್ರ ನಮಗೆ ಮುಕ್ತಿ. ಯಾವುದೇ ತೋರಿಕೆಯ ಆದರ್ಶಭಾವದಿಂದಲ್ಲ.

ವಸಂತದ ನೋಟ ಯಾರಿಗೆ ತಾನೇ ಇಷ್ಟವಿಲ್ಲ. ಹಳೆಯ ಎಲೆಗಳನ್ನು ಕಳೆದುಕೊಂಡು ಹೊಸ ಚೆಗುರಿನೊಂದಿಗೆ ಪ್ರತೀ ವರ್ಷವೂ ನಳನಳಿಸುವ ಆ ಸಸ್ಯ ರಾಶಿಯ ನೋಟವೆ ಚೆನ್ನ. ಆಸ್ಟ್ರೇಲಿಯಾದಲ್ಲಿ ಸೆಪ್ಟೆಂಬರ್ ಎಂದರೆ ವಸಂತಮಾಸ. ಹಬ್ಬಗಳ ಸರಮಾಲೆಯೇ ಹೊತ್ತು ತರುವ ಶ್ರಾವಣಮಾಸವೂ ಅಷ್ಟರ ಹೊತ್ತಿಗೆ ಶುರುವಾಗಿರುತ್ತದೆ. ನಮ್ಮಲ್ಲಿರಬಹುದಾದ ಆಷಾಡಭೂತಿಯನ್ನು ತಿಳಿದುಕೊಂಡು, ಇದ್ದರೆ ಅದನ್ನು ತೊರೆದು, ಬರುವ ವಸಂತಮಾಸವನ್ನು ಸಂಭ್ರಮದಿಂದ ಸ್ವಾಗತಿಸಿದರೆ "ಶ್ರಾವಣ ಬಂತು ಕಾಡಿಗೆ, ಬಂತು ನಾಡಿಗೆ, ಬಂತು ಬೀಡಿಗೆ, ಓ! ಬಂತು ಶ್ರಾವಣ ..." ಎಂಬ ಹಾಡು ಹೇಗೆ ಮೋಡಿ ಮಾಡುತ್ತದೆಯೋ, ನಮ್ಮ ಜೀವನಗಾನವೂ ಅಷ್ಟೇ ಬೆಡಗಿನಿಂದ ಕೂಡಿರುತ್ತದೆ. ▪

ಭಾರತದ ಮಾಜಿ ರಾಷ್ಟ್ರಪತಿ, ಭಾರತರತ್ನ ಶ್ರೀ ಎ. ಪಿ. ಜೆ ಅಬ್ದುಲ್ ಕಲಾಂ ಅವರ ನಿಧನಕ್ಕೆ ಹೊರನಾಡ ಚೆಲುಮೆಯು ಸಂತಾಪವನ್ನು ಸೂಚಿಸುತ್ತದೆ. ಅವರ ಸದ್ಗುಣಗಳು ಜೀವನಕ್ಕೆ ದಾರಿದೀಪವಾಗಲಿ ಎನ್ನುವುದು ನಮ್ಮ ಆಶಯ.

ಎರಡು ತಿಂಗಳ ಪ್ರಮುಖ ದಿನಗಳು

ಆಗಸ್ಟ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ, ಗ್ರೀಷ್ಮ/ವರ್ಷ ಋತು, ನಿಜ ಆಷಾಢ/ಶ್ರಾವಣ ಮಾಸ

03 ಸೋ - ಸಂಕಷ್ಟ ಚತುರ್ಥಿ
10 ಸೋ - ಕಾಮಿಕಾ ಏಕಾದಶಿ
14 ಶು - ನಿಜ ಆಟಿ ಅಮಾವಾಸ್ಯೆ
15 ಶ - ಭಾರತದ ಸ್ವಾತಂತ್ರ್ಯ ದಿನ, ಶ್ರಾವಣ ಮಾಸ ಆರಂಭ
18, 25 ಮಂ - ಮಂಗಳ ಗೌರಿ ವ್ರತ
19 ಬು - ನಾಗರ ಪಂಚಮಿ
26 ಬು - ಪುತ್ರದಾ ಏಕಾದಶಿ
28 ಶು - ವರಮಹಾಲಕ್ಷ್ಮಿ ವ್ರತ
29 ಶ - ನೂಲ ಹುಣ್ಣಿಮೆ

ಸೆಪ್ಟೆಂಬರ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ/ಭಾದ್ರಪದ ಮಾಸ

01 ಮಂ - ಮಂಗಳ ಗೌರಿ ವ್ರತ, ಸಂಕಷ್ಟ ಚತುರ್ಥಿ
05 ಶ - ಶ್ರೀ ಕೃಷ್ಣ ಜನ್ಮಾಷ್ಟಮಿ
08 ಮಂ -ಮಂಗಳ ಗೌರಿ ವ್ರತ, ಅಜಾ ಏಕಾದಶಿ
12 ಶ - ಬೆನಕನ ಏಕಾದಶಿ, 13 ಭಾ - ಅಮಾವಾಸ್ಯೆ
14 ಸೋ - ಭಾದ್ರಪದ ಮಾಸ ಆರಂಭ
15 ಮಂ - ಸರ್ ಎಂ ವಿಶ್ವೇಶ್ವರಯ್ಯನವರ ಜನ್ಮ ದಿನ
16 ಬು - ಸ್ವರ್ಣ ಗೌರಿ ವ್ರತ,
17 ಗು - ಗಣೇಶ ಚತುರ್ಥಿ
24 ಗು - ಬಕ್ರೀದ್, ಏಕಾದಶಿ
27 ಭಾ - ಅನಂತಪದ್ಮನಾಭ ವ್ರತ
28 ಸೋ - ಅನಂತನ ಹುಣ್ಣಿಮೆ/ಪಿತೃ ಪಕ್ಷ ಆರಂಭ

ಮಾಯಾಚೌಕ – ಒಂದು ಪರಿಚಯ

ಡಾ ॥ ಸಿ.ವಿ. ಮಧುಸೂದನ

ಹಿನ್ನೆಲೆ

ಭಾರತದ ಖಜುರಾಹೋವಿನಲ್ಲಿ ಚಂದೇಲಾ ರಾಜನು ಕಟ್ಟಿಸಿದ ಜೈನರ ಪಾರ್ಶ್ವನಾಥ ದೇವಾಲಯವಿದೆ. ಇದನ್ನು ನಿರ್ಮಿಸಿದ್ದು ಕ್ರಿ.ಶ. ೯೫೪ರಲ್ಲಿ ಎಂದು ಅಲ್ಲಿರುವ ಶಾಸನ ತಿಳಿಸುತ್ತದೆ. ಈ ಮಂದಿರದಲ್ಲಿ ಕೆಳಗಿನ ಕೆತ್ತನೆಯಿದೆ, ಚಿತ್ರ 1 (a): ಇದು ಒಂದು 4 x 4 ಮಾಯಾಚೌಕ – ಪ್ರಪಂಚದಲ್ಲಿಯೇ ಅತ್ಯಂತ ಹಳೆಯ ಮಾಯಾಚೌಕಗಳಲ್ಲಿ ಒಂದು. ಇದನ್ನು ರೋಮನ್ ಅಂಕೆಗಳಲ್ಲಿ ಚಿತ್ರ 1(b) ಯಲ್ಲಿ ತೋರಿಸಲಾಗಿದೆ.

ಚಿತ್ರ 1(a)

7	12	1	14
2	13	8	11
16	3	10	5
9	6	15	4

ಚಿತ್ರ 1(b)

7+12+1+14 = 34
2+13+8+11 = 34
16+3+10+5 =34
9+6+15+4 = 34
7+2+16+9 =34
12+13+3+6 =34
1+8+10+15 =34
14+11+5+4 = 34
7+13+10+4 = 34
14+8+3+9 =34

ಎಲ್ಲ "ಸಾಧಾರಣ" ಮಾಯಾಚೌಕಗಳ ವೈಶಿಷ್ಟ್ಯವೇನೆಂದರೆ ಇವುಗಳ ಪ್ರತಿ ಸಾಲಿನ ಸಂಖ್ಯೆಗಳನ್ನು ಎಡದಿಂದ ಬಲಕ್ಕಾಗಲಿ, ಮೇಲಿನಿಂದ ಕೆಳಗಾಗಲಿ ಅಥವಾ ಚೌಕದ ಒಂದು ಮೂಲೆಯಿಂದ ಇನ್ನೊಂದು ಮೂಲೆಗಾಗಲಿ ಕೂಡಿದರೆ ಒಂದೇ ಮೊತ್ತ ಬರುತ್ತದೆ. ಮೇಲಿನ ಉದಾಹರಣೆಯಲ್ಲಿ ಈ ಮೊತ್ತ 34. ಅದಕ್ಕೇ ಇದನ್ನು **ಚೌತೀಸ ಯಂತ್ರ** ಎಂದು ಕರೆಯುತ್ತಾರೆ.

"ಸಾಧಾರಣ" ಮಾಯಾಚೌಕಗಳಲ್ಲಿ ಅಂಕೆ 1 ರಿಂದ ಆಯಾ ಚೌಕದ ಆಯಾಮಕ್ಕೆ ಅನುಗುಣವಾಗಿ ಎಲ್ಲ ಸಂಖ್ಯೆಗಳನ್ನೂ ಒಂದು ಸಲ ಮಾತ್ರ ಬಳಸಬೇಕು. ಉದಾಹರಣೆಗೆ 3 x 3 ಚೌಕದಲ್ಲಿ 1 ರಿಂದ 9 ರ ವರೆಗೆ, 4 x 4 ಚೌಕದಲ್ಲಿ 1 ರಿಂದ 16 ರ ವರೆಗೆ, ಇದೇ ರೀತಿ n x n ಚೌಕದಲ್ಲಿ 1 ರಿಂದ n^2 ರ ವರೆಗೆ ಎಲ್ಲ ಸಂಖ್ಯೆಗಳನ್ನೂ ಬಳಸಬೇಕು.

ಹೈಸ್ಕೂಲ್ ಓದಿರುವ ಎಲ್ಲರಿಗೂ ತಿಳಿದಂತೆ, 1 ರಿಂದ n^2 ರ ವರೆಗಿನ ಎಲ್ಲ ಸಂಖ್ಯೆಗಳ ಮೊತ್ತ:

$$S = 1+2+3+...+ n^2 = n^2 \times (n^2 + 1)/2$$

ಚೌಕದಲ್ಲಿ n ಅಡ್ಡಸಾಲು (row) ಅಥವಾ ಕಂಬಸಾಲು (column) ಗಳಿವೆ.

ಆದ್ದರಿಂದ ಯಾವುದೇ ಸಾಲಿನ ಮೊತ್ತ, $C_n = S/n = n \times (n^2 + 1)/2$

ಮೇಲಿನ ಸಮೀಕರಣದ C_nಗೆ **ಮಾಯಾಮೊತ್ತ** "Magic Constant" ಎಂದು ಹೆಸರಿದೆ.

ಆದ್ದರಿಂದ 3 x 3 ಚೌಕಕ್ಕೆ $C_3 = 3 \times (9+1)/2 = 15$, 4 x 4 ಚೌಕಕ್ಕೆ $C_4 = 4 \times (16+1)/2 = 34$ (ಮೇಲೆ ಕಂಡಂತೆ), $C_5 = 65$, ಇತ್ಯಾದಿ.

ಮಾಯಾಚೌಕ ನಿರ್ಮಿಸುವ ಬಗೆ.

ಬೆಸ ಸಂಖ್ಯೆಯ ಚೌಕ (Odd Square). [ಚಿತ್ರ 2(a) ಮತ್ತು 2(b)]. ಎಲ್ಲಕ್ಕಿಂತ ಮೇಲಿನ ಸಾಲಿನ ಮಧ್ಯದ ಮನೆಯಲ್ಲಿ **1** ಅನ್ನು ಇಡಬೇಕು. ಮುಂದಿನ ಸಂಖ್ಯೆ **2** ಅನ್ನು ಅದರ ಮೇಲೆ ಮತ್ತು ಬಲಗಡೆಯಲ್ಲಿರುವ ಮನೆಯಲ್ಲಿಡಬೇಕು. ಹಾಗೆ ಮಾಡುವಾಗ ಚೌಕದಿಂದ ಮೇಲೆ ಹೋಗಬೇಕಾಗಿ ಬಂದರೆ, ಹೋಗಬೇಕೆಂದಿದ್ದ ಉದ್ದದ ಸಾಲಿನ ಅತ್ಯಂತ ಕೆಳಗಿನ ಮನೆಯಲ್ಲಿ ಸಂಖ್ಯೆಯನ್ನಿಡಬೇಕು (1→2). ಇದೇ ರೀತಿ ಚೌಕದಿಂದ ಬಲಗಡೆ ಹೋಗಬೇಕಾಗಿ ಬಂದರೆ, ಹೋಗಬೇಕೆಂದಿದ್ದ ಅಡ್ಡ ಸಾಲಿನ ಅತ್ಯಂತ ಎಡಗಡೆಯ ಮನೆಯಲ್ಲಿ ಮುಂದಿನ ಸಂಖ್ಯೆಯನ್ನು ಇಡಬೇಕು (2→3). ಒಂದು ವೇಳೆ ಹೋಗಬೇಕೆಂದಿದ್ದ ಮನೆ ಆಗಲೇ ತುಂಬಿದ್ದಲ್ಲಿ ನೇರವಾಗಿ ಕೆಳಗಿನ ಮನೆಗೆ ಹೋಗಿ (3→4), ಚಿತ್ರ 2(b) ಯಲ್ಲಿರುವಂತೆ ಮುಂದುವರಿಸಬೇಕು (4→5, 5→6) ಇತ್ಯಾದಿ.

ಮುಂದಿನ ಪುಟ ನೋಡಿ ...



ಚಿತ್ರ 2(a) ಚಿತ್ರ 2(b)

ಇದೇ ರೀತಿಯಲ್ಲಿ ಕೆಳಗೆ ಕೊಟ್ಟಿರುವ 5 x 5 , ಮುಂತಾದ ಚೌಕಗಳನ್ನು ರಚಿಸಬಹುದು.

17	24	1	8	15
23	5	7	14	16
4	6	13	20	22
10	12	19	21	3
11	18	25	2	9

C =65

ಸಮ ಸಂಖ್ಯೆಯ ಚೌಕ (Even Square)

ಉದಾಹರಣೆ: 4 x 4 ಮಾಯಾ ಚೌಕ: [ಚಿತ್ರ 3(a) ಮತ್ತು 3(b)]

ಚೌಕದ ಎಡದಿಂದ ಬಲಕ್ಕೂ ಮೇಲಿನಿಂದ ಕೆಳಕ್ಕೂ ಎಣಿಸುತ್ತ, 1 ರಿಂದ 16 ರ ವರೆಗಿನ ಸಂಖ್ಯೆಗಳನ್ನು **ಎರಡು ಕರ್ಣಗಳು ಹಾದು ಹೋಗುವ ಮನೆಗಳಲ್ಲಿ ಮಾತ್ರ** ಕ್ರಮವಾಗಿ ತುಂಬುತ್ತ ಬನ್ನಿ [ಚಿತ್ರ 3(a)]. ಈಗ ಉಳಿದ ಸಂಖ್ಯೆಗಳನ್ನು ಪ್ರತಿಲೋಮ ರೀತಿಯಲ್ಲಿ (reverse order), ಎಂದರೆ 15, 14, 12, 9, 8, 5, 3, 2 ಈ ಸಂಖ್ಯೆಗಳನ್ನು ಖಾಲಿ ಇರುವ ಮನೆಗಳಲ್ಲಿ ಒಂದೊಂದಾಗಿ ತುಂಬಿಸಿ [ಚಿತ್ರ 3(b)].



ಚಿತ್ರ 3(a) ಚಿತ್ರ 3(b)

ಇಲ್ಲಿ ನಾವು ರಚಿಸಿರುವ ಚೌಕ, ಖಜುರಾಹೋ ಚೌಕದಿಂದ ಭಿನ್ನವಾಗಿದೆಯಲ್ಲವೇ? ಒಂದೇ ಆಯಾಮದ ಚೌಕಕ್ಕೆ ಅನೇಕ ರೂಪಾಂತರಗಳು ಇರಲು ಸಾಧ್ಯ ಎಂಬುದಕ್ಕೆ ಇದೊಂದು ಉದಾಹರಣೆ.

ಇದೇ ಬಗೆಯಲ್ಲಿ 8 x 8, 12 x 12 ($n = 4m; m \geq 1$) ಮುಂತಾದ ಮಾಯಾ ಚೌಕಗಳನ್ನು ರಚಿಸಬಹುದು.

ಆದರೆ 6 x 6 , 10 x 10 ($n = 2m$; m, ಬೆಸ ಸಂಖ್ಯೆ) ಮುಂತಾದ ಚೌಕಗಳಿಗೆ ಬೇರೆ ವಿಧಾನಗಳನ್ನು ಅನುಸರಿಸಬೇಕು.

ಭಾರತದಲ್ಲಿ ಮಾಯಾಚೌಕ

ಖಜುರಾಹೋ ಕಾಲದಿಂದ ಮಾತ್ರವಲ್ಲ, ಭಾರತದಲ್ಲಿ ಮಾಯಚೌಕಗಳು ವೇದಗಳ ಕಾಲದಿಂದಲೂ ಬಳಕೆಯಲ್ಲಿವೆ. ಕ್ರಿ.ಪೂ. ಒಂದನೆಯ ಶತಮಾನದ ಸುಮಾರಿನಲ್ಲಿದ್ದ ಗರ್ಗ ಮುನಿಯು **3 X 3** ಮಾಯಾ ಚೌಕವನ್ನು ನವಗ್ರಹಶಾಂತಿಗಾಗಿ ಉಪಯೋಗಿಸುತ್ತಿದ್ದನಂತೆ. (ಚೈನಾದ ಪ್ರಾಚೀನ ಕಥೆಯಾದ **ಲೋ ಷು** ವಿನಲ್ಲಿ ಇದೇ **3 X 3** ಚೌಕದ ಸಹಾಯದಿಂದ ನದೀಪ್ರವಾಹವನ್ನು ತಡೆಗಟ್ಟಿದರೆಂದು ತಿಳಿದುಬರುತ್ತದೆ). ಅಶುಭವನ್ನು ನಿವಾರಿಸುವುದಕ್ಕೂ, ಮಂಗಳವನ್ನು ತರುವುದಕ್ಕೂ ಭಾರತೀಯ ಸ್ತ್ರೀಯರು ತಮ್ಮ ಮನೆಗಳ ಮುಂದೆ ಇಡುವ ರಂಗೋಲಿಯಲ್ಲೂ **3 X 3** ಮಾಯಾ ಚೌಕವನ್ನು ಕೆಲವು ವೇಳೆ ಬಳಸುವುದುಂಟು.

ಮುಂದಿನ ಪುಟ ನೋಡಿ ...

ಇದು ಎಷ್ಟು ಶತಮಾನಗಳ ಕಾಲದಿಂದ ನಡೆದುಬರುತ್ತಿದೆಯೋ ತಿಳಿಯದು. ಭಾರತೀಯರು ವಿವಿಧ **4 x 4** ಚೌಕಗಳ "ಯಂತ್ರಗಳನ್ನು" (ತಾಯಿತಗಳನ್ನು) ತಮ್ಮ ರಕ್ಷಣೆಗಾಗಿ ಉಪಯೋಗಿಸುತ್ತಿದ್ದರೆಂದು ಲಘುನಂದನನ ಸ್ಮೃತಿತತ್ತ್ವ (ಕ್ರಿ.ಶ. ೧೫೦೦) ತಿಳಿಸುತ್ತದೆ (ಕೆಳಗಿನ ಪಟ್ಟಿಯನ್ನು ನೋಡಿ). **ಸೂಚನೆ: ಈ ಪಟ್ಟಿಯಲ್ಲಿ 34 ಮಾಯಾಮೊತ್ತವಿರುವ 4 ನೆಯದು ಮಾತ್ರ "ಸಾಧಾರಣ" ಮಾಯಾಚೌಕ:**

ಕ್ರಮಾಂಕ	ಮಾಯಾಮೊತ್ತ	ಉದ್ದೇಶ
1	20	ವಿಷಪರಿಹಾರಕ್ಕಾಗಿ
2	28	ಬೆಳೆಗಳನ್ನು ಕ್ರಿಮಿಕೀಟಗಳಿಂದ ರಕ್ಷಿಸಲು
3	32	ಸುಖಪ್ರಸವಕ್ಕಾಗಿ
4	34	ಪ್ರಯಾಣಿಕರ ಸುರಕ್ಷೆಗೆ
5	50	ಭೂತಪ್ರೇತಗಳನ್ನು ನಿವಾರಿಸಲು
6	64	ಯೋಧರ ರಕ್ಷಣೆಗಾಗಿ
7	72	ಬಂಜೆತನ ನಿವಾರಣೆಗೆ
8	84	ಅಳುವ ಮಕ್ಕಳನ್ನು ಸಂತೈಸುವುದಕ್ಕೆ

ಚಾರಿತ್ರಿಕ ಹಿನ್ನೆಲೆಯಿಂದ ನೋಡಿದರೆ ಭಾರತದಲ್ಲಿ ಮಾಯಾಚೌಕದ ಮೊಟ್ಟಮೊದಲ ಉಲ್ಲೇಖ ನಮಗೆ ಸಿಗುವುದು **ವರಾಹಮಿಹಿರನ ಬೃಹತ್ಸಂಹಿತೆಯಲ್ಲಿ** (ಕ್ರಿ.ಶ.೫೫೦). ಇದರಲ್ಲಿ **4 x 4** ಮಾಯಾಚೌಕವನ್ನು ಬಳಸಿ ವಿವಿಧ ಸುಗಂಧ ದ್ರವ್ಯಗಳನ್ನು ತಯಾರಿಸುವಾಗ ಘಟಕ ಪದಾರ್ಥಗಳ (ingredients) ಪ್ರಮಾಣಗಳು ಎಷ್ಟೆಷ್ಟು ಇರಬೇಕೆಂದು ತಿಳಿಸುತ್ತಾನೆ. ನಾರಾಯಣ ಪಂಡಿತನು ತನ್ನ ಗಣಿತಕೌಮುದೀ (ಕ್ರಿ.ಶ.೧೩೫೬) ಎಂಬ ಗ್ರಂಥದ ಕೊನೆಯ ಅಧ್ಯಾಯವಾದ ಭದ್ರಗಣಿತದ ೫೫ ಶ್ಲೋಕಗಳಲ್ಲಿ ಚೌಕಗಳನ್ನು ರಚಿಸುವ ವಿಧಾನಗಳನ್ನೂ,೧೭ ಶ್ಲೋಕಗಳಲ್ಲಿ ಉದಾಹರಣೆಗಳನ್ನೂ ಕೊಟ್ಟಿರುತ್ತಾನೆ. ಇವುಗಳಲ್ಲಿ ಒಂದು ಉದಾಹರಣೆ **14 x 14** ಆಯಾಮದ ಬೃಹತ್ ಮಾಯಾಚೌಕ, ಮಾಯಮೊತ್ತ 1379! ಇವೇ ಅಲ್ಲದೆ ನಾರಾಯಣನು ಮಾಯಾವೃತ್ತ (C = 360) ಮತ್ತು ಮಾಯಾಕಮಲ (C = 294) ಇವುಗಳನ್ನೂ ವಿವರಿಸಿದ್ದಾನೆ. ಮೇಲೆ ವಿವರಿಸಿದ 4 x 4 ಚೌಕಕ್ಕೆ 384 ರೂಪಾಂತರಗಳು ಇರಲು ಸಾಧ್ಯ ಎಂದೂ ನಾರಾಯಣನು ತಿಳಿಸುತ್ತಾನೆ.

22	12	18	87
88	17	9	25
10	24	89	16
19	86	23	11

ಚಿತ್ರ 4 **C =139**

ಮಾಯಾಚೌಕವನ್ನು ರಚಿಸುವ ವಿಧಾನಗಳನ್ನು ಅಸಾಧಾರಣ ಪ್ರತಿಭಾವಂತರಾದ ಶ್ರೀನಿವಾಸ ರಾಮಾನುಜಂ (1887-1920) ಅವರು ತಮ್ಮ ಎರಡು Notebook ಗಳಲ್ಲಿ ವಿವರಿಸಿದ್ದಾರೆ. ಅಂದಹಾಗೆ ಇವರ ಜನ್ಮದಿನದ (22-12-1887) ಸಂಖ್ಯೆಗಳನ್ನು ಉಪಯೋಗಿಸಿ ರಚಿಸಿರುವ ಮಾಯಚೌಕವನ್ನು ನೀವು ನೋಡಿರಬಹುದು.(ಚಿತ್ರ 4). ಇದರ ಮಾಯಮೊತ್ತ 139. ಆದರೆ ಇದು "ಸಾಧಾರಣ" ಮಾಯಾಚೌಕವಲ್ಲ. ಇದೆ ರೀತಿ ಬಾಪೂಜಿ ಅವರ ಜನ್ಮದಿನದ (02-10 -1869) ಮಾಯಚೌಕವನ್ನೂ ರಚಿಸಿದ್ದಾರೆ.

ಕೊನೆಯ ಮಾತು

ಮೇಲೆ ವಿವರಿಸಿದ ಮಾಯಾಚೌಕಗಳಲ್ಲದೆ ಬರಿಯ ಬೆಸ ಸಂಖ್ಯೆಗಳ (odd numbers only), ಬರಿಯ ಅವಿಭಾಜ್ಯ ಸಂಖ್ಯೆಗಳ (prime numbers only) ಮತ್ತಿತರ ಅನೇಕ ಚೌಕಗಳನ್ನು ರಚಿಸಬಹುದು. ಈ ಲೇಖನವು ಮಾಯಾಚೌಕದ ಕಿರುಪರಿಚಯ ಮಾತ್ರ. ಮಾಯಚೌಕದ ಬಗ್ಗೆ ನೂರಾರು ವರ್ಷಗಳಿಂದ ಬರೆದಿರುವ ಅನೇಕ ಸ್ವಾರಸ್ಯಮಯ ಗ್ರಂಥಗಳೂ ವಿದ್ವತ್ಪೂರ್ಣ ಪ್ರಬಂಧಗಳೂ ಲಭ್ಯವೆಂದು ನಿಮಗೀಗಾಗಲೇ ವೇದ್ಯವಾಗಿರಬೇಕು. ▪

ಅನ್ನದಾತುರಕಿಂತ ಚೆನ್ನದಾತುರ ತೀಕ್ಷ್ಣ
ಚೆನ್ನದಾತುರಕಿಂತ ಹೆಣ್ಣುಗಂಡೊಲವು
ಮನ್ನಣೆಯ ದಾಹ ಈ ಎಲ್ಲಕುಂ ತೀಕ್ಷಣತಮ
ತಿನ್ನುವುದಾತ್ಮವನೆ - ಮಂಕುತಿಮ್ಮ

ಈ ಮೇಲಿನ ಅರ್ಥಪೂರ್ಣ ನಾಕು ಸಾಲಿನ ಉತ್ತಮ ಉಕ್ತಿ ಶ್ರೀ ಡಿ.ವಿ.ಜಿ. ರವರ ಮಂಕುತಿಮ್ಮನ ಕಗ್ಗದಿಂದ ಆಯ್ದದ್ದು.

ಮನ್ನಣೆಯ ಆತುರ

ಶ್ರೀ ಡಿ.ವಿ. ಗುಂಡಪ್ಪನವರು ದಾರ್ಶನಿಕರು. ಮನುಷ್ಯನ ನಿತ್ಯ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಿ, ನಮಗೆ 'ಮಂಕು ತಿಮ್ಮನ ಕಗ್ಗ' ದಂತಹ ಉತ್ತಮ ಕೃತಿಯನ್ನು ಕೊಟ್ಟಿದ್ದಾರೆ.

ಶ್ರೀಮದ್ ಭಗವತ್ ಗೀತೆಯಲ್ಲಿ ಎಷ್ಟು ಜೀವನದ ಸಾರವಡಗಿದೆಯೊ ಅಷ್ಟೇ ಸಾರ ಶ್ರೀಯುತರ ಮಂಕುತಿಮ್ಮನ ಕಗ್ಗದಲ್ಲಿ ಅಡಗಿದೆ ಎಂದರೆ ಅತಿಶಯೋಕ್ತಿ ಆಗಲಾರದು.

ಮೇಲಿನ ಕಗ್ಗದ ಮೊದಲನೆಯ ಸಾಲಿನಲ್ಲಿ ಹೇಳಿರುವ ಅನ್ನದಾತುರ ಸಹಜ, ಅವಶ್ಯಕ ಮತ್ತು ಸ್ವಾಭಾವಿಕ. ಆದರೆ ಹೊನ್ನಿನಾತುರ ಅಂದರೆ ಹಣ ಸಂಗ್ರಹಿಸುವ ಕ್ರಿಯೆಯ ಸೆಳೆತ ಹಸಿವಿಗಿಂತಲೂ ಹೆಚ್ಚು. ಹೆಣ್ಣು ಗಂಡಿನ ಪ್ರೀತಿ ಅನ್ನದಾತುರ ಮತ್ತು ಚೆನ್ನದಾತುರವನ್ನು ಮೀರಿಸುತ್ತದೆ. ಮನ್ನಣೆಯ ದಾಹ ಎಂದರೆ ತಾನು ಮುಖ್ಯ, ತಾನು ಉತ್ತಮ ಮತ್ತು ತನಗೆ ಮೊದಲು ಪ್ರಾಶಸ್ತ್ಯ ಕೊಡಬೇಕು ಎಂಬುದು.

ಅನ್ನದಾತುರ, ಚೆನ್ನದಾತುರ ಮತ್ತು ಹೆಣ್ಣು ಗಂಡೊಲವಿನ ಸೆಳೆತ ಇವೆಲ್ಲದರ ಆತುರವನ್ನು ಮನ್ನಣೆಯ ದಾಹ ಮೀರಿಸುತ್ತದೆ. ಈ ಮನ್ನಣೆ ಎಂಬುವುದು ನಮ್ಮ ಒಳ್ಳೆಯ ಗುಣಗಳನ್ನು ನಿರ್ಣಾಮ ಮಾಡುತ್ತದೆ ಎಂಬ ಉತ್ತಮ ಸಂದೇಶವನ್ನು ಶ್ರೀ ಡಿ.ವಿ.ಜಿ ರವರು ತಮ್ಮ ಮಂಕುತಿಮ್ಮನ ಮೂಲಕ ನಮಗೆ ತಿಳಿಸಿದ್ದಾರೆ.

ಒಂದು ಕಥೆ.

ಒಂದು ಊರು. ಆ ಊರಿನಲ್ಲಿ ಒಂದು ದೊಡ್ಡ ಸಮಾರಂಭ. ಬೇರೆ ಬೇರೆ ಊರುಗಳಿಂದ ಪ್ರಮುಖರಿಗೆ ಆ ಸಮಾರಂಭಕ್ಕೆ ಆಹ್ವಾನ. ಸಮಾರಂಭದ ಕೊನೆಯಲ್ಲಿ ಔತಣದ ಕಾರ್ಯಕ್ರಮ. ಆ ಕಾರ್ಯಕ್ರಮದ ಕಾರ್ಯಕರ್ತರು ಎಲ್ಲರಿಗೂ ವಿನಮ್ರವಾಗಿ ಭೋಜನಕ್ಕೆ ಬರಲು ಆಮಂತ್ರಣ ನೀಡುತ್ತಾರೆ. ಒಂದು ಸಣ್ಣ ಊರಿನ ಪರವಾಗಿ ಆ ಕಾರ್ಯಕ್ರಮಕ್ಕೆ ಬಂದ ಪ್ರಮುಖ ಬಹಳ ಜಂಭದ ಮನುಷ್ಯ ಮತ್ತು ಗರ್ವಿ. ಭೋಜನಶಾಲೆಯನ್ನು ನೇರವಾಗಿ ಪ್ರವೇಶಿಸಿದ ಮತ್ತು ಭಕ್ಷ್ಯಗಳನ್ನು ಬಡಿಸಿದ ಆ ಸಾಲಿನ ಮೊದಲನೆಯ ಎಲೆಯಮುಂದೆ ಕುಳಿತ.

ಅಲ್ಲಿಯೇ ಓಡಾಡುತ್ತಿದ್ದ ಒಬ್ಬ ಕಾರ್ಯಕರ್ತ ವಿನಮ್ರದಿಂದ, ಆ ಊಟದ ಎಲೆಯು ಮತ್ತು ಆ ಸ್ಥಳವು ಒಬ್ಬ ಪ್ರತಿಷ್ಠಿತ ವ್ಯಕ್ತಿಗೆ ಮೀಸಲಾಗಿದೆ ಎಂದು ತಿಳಿಸಿ ಆ ಜಾಗದಿಂದ ಆ ಪ್ರಮುಖನನ್ನು ತೆರೆಗೊಳಿಸಿದ.

ಆ ಪ್ರಮುಖ ಎರಡನೆಯ ಊಟದೆಲೆಯ ಮುಂದೆ ಕುಳಿತ, ಅವನು ಅಲ್ಲಿಂದಲೂ ನಿರ್ಗಮಿಸಬೇಕಾಯ್ತು. ಹೀಗೆಯೇ ಇವನಿಗಿಂತಲೂ ಪ್ರತಿಷ್ಠರೆನಿಸಿದ ವ್ಯಕ್ತಿಗಳಿಗೆ ಮೀಸಲಾಗಿದ್ದ ಎಲೆಗಳ ಮುಂದೆ ಕೂಡಲು ಅಲ್ಲಿನ ಆ ಕಾರ್ಯಕರ್ತರು ಬಿಡಲಿಲ್ಲ. ಅವನಿಗೆ ಮುಖ ಭಂಗವಾಯಿತು. ಊಟ ಮಾಡದೆ ಅಲ್ಲಿಂದ ತನ್ನ ಊರಿಗೆ ಮರಳಿದ.

ಸ್ವಲ್ಪ ಹೊತ್ತಿನ ನಂತರ ಆ ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ಆಕ್ರಮಿಸಿದ್ದ ಗೌರವಾನ್ವಿತ ವ್ಯಕ್ತಿ ಔತಣ ಆಲಯವನ್ನು ಪ್ರವೇಶಿಸಿದ. ನೇರವಾಗಿ ಸಾಲಿನ ಕೊನೆ ಎಲೆಯಲ್ಲಿ ಕುಳಿತ. ಅಲ್ಲಿನ ಹತ್ತು ಹಲವು ಕಾರ್ಯಕರ್ತರು ಗಾಬರಿಗೊಂಡು, ಆ ಗೌರಾವಾನ್ವಿತ ವ್ಯಕ್ತಿಗೆ ಕೈಮುಗಿದು ಅವನನ್ನು ವಿಶೇಷ ಅಡುಗೆಯನ್ನು ಬಡಿಸಿದ ಆ ಸಾಲಿನ ಮೊದನೆಯ ಎಲೆಗೆ ಕರೆದೊಯ್ದು ಕೂಡಿಸಿದರು.

ಆ ಸಣ್ಣ ಊರಿನ ಪ್ರಮುಖ ಮನ್ನಣೆಯ ದಾಹವಿರುವವ. ಅವನಿಗೆ ತಾನೇ ದೊಡ್ಡವನೆಂಬ ಭ್ರಮೆ. ಈ ಮನ್ನಣೆಯ ಭ್ರಮೆಯಿಂದ ಅವನಿಗೆ ಅಲ್ಲಿನ ರುಚಿ ರುಚಿಯಾದ ಊಟ ಸಿಗದಂತಾಯಿತು. ಆದರೆ, ಆ ಇನ್ನೊಬ್ಬ ಪ್ರಮುಖವ್ಯಕ್ತಿ ಅಲ್ಲಿ ನೆರೆದಿದ್ದ ಎಲ್ಲ ಜನರ ಗಮನ ಸೆಳೆದ. ಅವನ ವಿನಮ್ರತೆ ಮತ್ತು ಸಜ್ಜನಿಕೆ ಅವನನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದಿತು. ಈ ಎರಡನೆಯವ ಮನ್ನಣೆಯ ದಾಹವನ್ನು ಮೀರಿದವ.

ನಾವು ಕೂಡ ಸಾಮಾನ್ಯರಾಗುವ. ನಾವು ಅಸಾಮಾನ್ಯರಾಗಿದ್ದರೆ ನಮ್ಮ ಸುತ್ತಲು ನೆರೆದ ಪ್ರಜೆಗಳು ಗುರುತಿಸಲಿ. ನಮ್ಮ ಯೋಗ್ಯತೆಗೆ ತಕ್ಕಂತೆ ಸ್ಥಾನ ಅವರುಗಳೇ ದಯಪಾಲಿಸಲಿ. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಉಗಿ-ಬಂಡಿ

ಕಾನೂನು ಇಷ್ಟು ಕಠಿಣವಾಗವಾಗಬಾರದು ಸ್ವಾಮಿ. ಉಗುಳುವುದು ನಮ್ಮ ಪರಂಪರೆ. ನಮ್ಮ ತಾತ, ಮುತ್ತಾತ, ಕೋಲ್ತಾತ ಎಲ್ಲರೂ ಬೀದಿಯಲ್ಲಿ ಉಗುಳಿದವರೇ. ಉಗಿತದಿಂದ ಬಹಳ ಪ್ರಯೋಜನಗಳಿವೆ. ಹಾಡ್ತಾ ಹಾಡ್ತಾ ರಾಗ, ಉಗುಳ್ತಾ ಉಗುಳ್ತಾ ರೋಗ ಅಂತ ಕೇಳಿಲ್ಲವೇ? ನಮ್ಮ ಉಗಿತವೇ ಹಲವಾರು ನರ್ಸಿಂಗ್‌ಹೋಂಗಳಿಗೆ ಕಾಲಕ್ರಮೇಣ ಬಂಡವಾಳವಾಗುವುದು. ಉಗಿತಕ್ಕೂ, ನಮ್ಮ ಜೀವನಕ್ಕೂ ಒಂದು ವಿಧವಾದ ಬೆಸುಗೆ ಏರ್ಪಟ್ಟಿದೆ. ಆದ್ದರಿಂದಲೇ ಬೆಸುಗೆ ಚಿತ್ರದ ಟೈಟಲ್ ಸಾಂಗ್‌ನ ಮಾದರಿಯಲ್ಲೇ

ಉಗಿತ ಉಗಿತ ಉಗಿತ ಉಗಿತ

ಒಮ್ಮೆ ಉಗಿದರೆ ಮತ್ತೊಂದುಗಿತ

ಕ್ಯಾಕರಿಸುತ್ತ ಉಗಿಯುವ ಉಗಿತ

ಗುಟ್ಕಾ ಲೇಪದ ಕೆಂಪಿನ ಉಗಿತ

ತಂಬಾಕಿನ ಜೊತೆ ಅಡಕೆಯ ಜಗಿತ

ಎಲ್ಲವು ಸೇರಿ ಉಗಿತವೊ ಉಗಿತ

ಎಂದು ಹಾಡುತ್ತಾ ಸಂತೋಷದಿಂದ ಉಗಿಯುತ್ತಾ ಸಾಗುವ ಉಗಿ-ಬಂಡಿಗಳು ನಾವು. ಹಿಂದಿನ ಕಾಲದಲ್ಲಿ ಉಗಿಯುವುದಕ್ಕೇ ಒಂದು ಮಹತ್ವವಿತ್ತು. ಹೊರಗೆ ಹೋಗಲು ಆಗದ ಅನಾರೋಗ್ಯವೋ, ಸೋಮಾರಿತನವೋ ಇರುವ ಹಿರಿಯರು ಕೂತೆಡೆಯೇ ಒಂದು ಡಬ್ಬಿಯಲ್ಲಿ ಉಗಿಯುತ್ತಿದ್ದರು. ದೊಡ್ಡವರ ಮನೆಗಳಲ್ಲಿ ವೀಳ್ಯದೆಲೆ ಹಾಕಿಕೊಂಡ ನಂತರ ಉಗಿಯಲೆಂದು ಪೀಕದಾನಿಗಳನ್ನೇ ಇಟ್ಟಿರುತ್ತಿದ್ದರು.

ಜೈಪುರವನ್ನು ಅದ್ಯಾರೋ ಅದ್ಯಾಕೋ ಪಿಂಕ್ ಸಿಟಿ ಅಂತ ಕರೆದರು. ನಾವೂ ನಮ್ಮನಮ್ಮ ನಗರಗಳಿಗೆ ಬಣ್ಣ ಕೊಡೋಣಾಂತ ತೀರ್ಮಾನ ಮಾಡಿ ಗುಟ್ಕಾ ಹಾಕ್ಕೊಂಡು ಉಗಿದು, ಉಗಿದು ನಮ್ಮ ಸಿಟೀನ ರೆಡ್ ಸಿಟಿ ಮಾಡಿದೆವು.

ಕೆಂಪಾದವೋ ಎಲ್ಲ ಕೆಂಪಾದವೋ। ಹಸಿರಿದ್ದ ಗಿಡ ಮರ।

ಕಪ್ಪಗಿದ್ದ ರೋಡೆಲ್ಲ। ಗುಟ್ಕಾದ ಪ್ರಿಯರಿಂದ ಕೆಂಪಾದವೋ।

ಮೋರಿ ಕಾಂಪೌಂಡುಗಳು ಕೆಂಪಾದವೋ।

ಎಂಬ ಮಟ್ಟಕ್ಕೆ ನಮ್ಮ ಸಾಧನೆಯಾಗಿತ್ತು. ಎಲ್ಲೆಲ್ಲಿಯೂ ಕೆಂ-ಬಣ್ಣ. (ನಮಗೆ ಕೆಮ್ಮು, ಬೀದಿಗೆ ಬಣ್ಣ). ಛೆ! ಸರ್ಕಾರ ಗುಟ್ಕಾ ಬ್ಯಾನ್ ಮಾಡಿ ನಮ್ಮ ನಿತ್ಯೋತ್ಸವವವಾದ ಉಗುಳೋತ್ಸವಕ್ಕೆ ಭಂಗ ತಂದು ನಗರದ ರಂಗನ್ನು ಹಾಳುಗೆಡವಿತು. ವಜ್ರವನ್ನು ವಜ್ರದಿಂದಲೇ ಕತ್ತರಿಸು ಅನ್ನುವಂತೆ ಉಗಿತವನ್ನು ಉಗಿತದಿಂದಲೇ ಎದುರಿಸು ಅನ್ನೋದೇ ನಮ್ಮ ಮೋಟೋ. ಮನೆಯಲ್ಲಿ ಹೆಂಡತಿ ಉಗಿಯುತ್ತಾಳೆ. ಕಚೇರಿಯಲ್ಲಿ ಬಾಸ್ ಉಗಿಯುತ್ತಾರೆ. ನಾವು, ಮೀಸೆ ಹೊತ್ತ ಗಂಡಸರು, ಎಲ್ಲಿ ಉಗಿಯುವುದು ಹೇಳಿ! ಮನೆಯಲ್ಲುಗಿದರೆ ಮಾರಿಪೂಜೆ, ಆಫೀಸಲ್ಲುಗಿದರೆ ಗೇಟ್‌ಪಾಸ್. ಆದ್ದರಿಂದ ಬೀದಿಯೇ ಗತಿಯೆಂದು ಬೀದಿಯಲ್ಲಿ ಉಗಿದರೆ ಅದಕ್ಕೂ ಸರ್ಕಾರ ದಂಡ ವಿಧಿಸುತ್ತೇವೆ ಎನ್ನುವುದಲ್ಲ!

ಮುಂದಿನ ಪುಟ ನೋಡಿ ...

ಇನ್ನುಮುಂದೆ ನೂರು ರೂ ದಂಡ ಅಥವಾ ಐವತ್ತು ಲಂಚ ಎನ್ನುವ ಪೊಲೀಸ್‌ಗೆ ಕಂಡಕಂಡ ಉಗಿತಕ್ಕೆಲ್ಲ ಐವತ್ತರ ಸಮಾರಾಧನೆ. ಥೂ! ಉಗಿತಕ್ಕೆ ಒಂದು ಪ್ರಮುಖ ಕಾರಣವೂ ಇದೆ. ಕೆಲವೊಮ್ಮೆ ನಾವು ಹೊಸ ಬಡಾವಣೆಗಳಿಗೆ ಹೋಗುತ್ತೇವೆ, ಬರಲು ದಾರಿ ತಿಳಿದಿರುವುದಿಲ್ಲ. ಹೀಗೆ ಬೀದಿಯಲ್ಲಿ ಉಗಿದುಕೊಂಡುಹೋದರೆ ನಮ್ಮ ಉಗಿತದ ಜಾಡು ಹಿಡಿದೇ ವಾಪಸ್ ಬಂದರೆ ಮನೆ ಸೇರುವುದು ಖಚಿತ.

ಉಗಿಯುವಿಕೆ ಎನ್ನುವುದಕ್ಕೆ ಹೊಸ ಆಯಾಮವನ್ನೇ ಇತ್ತವರು ರಾಜಕಾರಣಿಗಳು. ದಿನಕ್ಕೊಂದು ಆರೋಪ ಹೊರಿಸಿ, ಜನ್ಮ ಜಾಲಾಡುವ ಮಟ್ಟಕ್ಕೆ ಉಗಿಯುತ್ತಾ ಇಡೀ ಸದನವನ್ನೇ ಪೀಕದಾನಿಯಾಗಿ ಮಾರ್ಪಡಿಸುವ ತಾಕತ್ತು ಇರುವ ಇವರು ಉಗಿತದೊಂದಿಗೆ ಆಡುವ ಭಾಷೆ, ನಡೆದುಕೊಳ್ಳುವ ರೀತಿ ಅನನ್ಯ, ಅಸಹ್ಯ. ಅದು ಅವರ ತಪ್ಪೂ ಅಲ್ಲವಂತೆ. ಹುಟ್ಟಿನಿಂದ ಬಂದಿಲ್ಲದಿದ್ದರೂ, ಬೆಳೆದಂತೆ ಉಗಿಯುವ ಗುಣವನ್ನು ರೂಢಿಸಿಕೊಳ್ಳುವ ಇವರು ರೌಡಿಯಾಗುತ್ತಾರೆ. ರೌಡಿಗೆ ಸಭ್ಯ ಭಾಷೆಯ ಅಲರ್ಜಿ. ವೇಷಕ್ಕೆ ತಕ್ಕ ಭಾಷೆ ಇರಬೇಕಾದ್ದರಿಂದ ಉಗಿತದಲ್ಲಿ ಪಿಹೆಚ್‌ಡಿ (ಪಿ ಫಾರ್ ಪೋಲಿ, ಹೆಚ್ ಫಾರ್ ಹಲ್ಕಾ, ಡಿ ಫಾರ್ ಡರ್ಟಿ) ಮಟ್ಟ ತಲುಪುವ ಇವರ ಭಾಷೆ ಹೀಗಿರುವುದೇ ಸೂಕ್ತವಂತೆ. ಹಾಗೆಲ್ಲ ಉಗಿಯಬೇಡಿರೈ ಎಂದರೆ ಉಗಿಯುವಿಕೆ ನಮ್ಮ ಸಂವಿಧಾನಾತ್ಮಕ ಹಕ್ಕು ಎನ್ನುತ್ತವೆ ಆಡಳಿತಪಕ್ಷ ಮತ್ತು ವಿರೋಧಪಕ್ಷಗಳು. ಈ ಎರಡೂ ಪಕ್ಷಗಳು ಒಪ್ಪುವುದು ಎರಡೇ ವಿಷಯಗಳಿಗೆ – ಸಂಬಳ ಹೆಚ್ಚಳ, ಬೈಗುಳದ ಸುರಿಮಳೆ! ನೀವೇ ಹೇಳಿ ಸ್ವಾಮಿ, ಲೋಕಸಭೆಯಲ್ಲೇ ಪರಸ್ಪರ ಉಗಿಯುವಾಗ ನಾವು, ಹುಲುಮಾನವರು ಬೀದಿಯಲ್ಲಿ ಉಗಿದರೆ ತಪ್ಪೆನ್ನುವುದು ತಪ್ಪಲ್ಲವೇ?

ಇಂತಿಪ್ಪ ನಾಡಿನೊಳ್ ಉಗಿದರೆ ನೂರು ರೂಪಾಯಿ ದಂಡ ಎಂದು ಹೇಳಿವುದು ತರವೇ? ಉಗಿತ ಎನ್ನುವುದಕ್ಕೆ ಬೈಗುಳ, ಹೀಯಾಳಿಕೆ, ಅವಹೇಳನ ಎಲ್ಲವೂ ಪರ್ಯಾಯ ಪದಗಳಲ್ಲವೇ... ಬೈಗುಳ ಇಲ್ಲದಿದ್ದರೆ ಜೀವನ ಸಾಧ್ಯವೇ? ಬೈಗುಳ ಇಲ್ಲದಿದ್ದರೆ ಪೀತಪತ್ರಿಕೆಗಳನ್ನು ನಡೆಸಲು ಆಗುವುದಿಲ್ಲ. ಅತ್ತೆ ಸೊಸೆಯನ್ನು, ಸೊಸೆ ಮಗನನ್ನು ಬಯ್ಯದಿದ್ದರೆ ಸೀರಿಯಲ್‌ಗಳ ಕಥೆ ಸಾಗುವುದೇ ಇಲ್ಲ. ಕ್ರೈಂ ನ್ಯೂಸ್‌ಗಳನ್ನು ನಡೆಸುವವರಂತೂ ನೂತನ ಬೈಗುಳಗಳನ್ನು ಸೃಷ್ಟಿಸುವಲ್ಲಿ ಪರಿಣಿತರು. ನ್ಯೂಸ್ ಚಾನಲ್‌ಗಳಿಗಂತೂ ಅವರಿವರನ್ನು ತೆಗಳದಿರಿ ಎಂದರೆ ವಿಷಯವೇ ಇಲ್ಲದೆ ಮೌನವ್ರತ ಆಚರಿಸುವ ಸ್ಥಿತಿ ಒದಗಿಬಿಡುತ್ತದೆ. ಶಾಲೆಯಲ್ಲಿ ವಿದ್ಯಾರ್ಥಿಯನ್ನು ಮೇಷ್ಟ್ರು, ಬೀದಿಯಲ್ಲಿ ಮೇಷ್ಟ್ರನ್ನು ವಿದ್ಯಾರ್ಥಿ ಬಯ್ಯದಿದ್ದರೆ ಅದೆಂತಹ ಆಧುನಿಕ ಸಂಬಂಧವಾದೀತು? ಇತ್ತೀಚೆಗೆ ಒಂದು ಕನ್ನಡ ದೈನಿಕವು ಬೈಗುಳದ ಪದಗಳನ್ನೇ ಆರಿಸಿಕೊಂಡು ದಿನಕ್ಕೊಂದು ಪದಕ್ಕೆ ಅರ್ಥ ನೀಡುತ್ತಿತ್ತು. ಬೈಗುಳ ಉರುಫ್ ಉಗಿತ ಪ್ರಸ್ತುತವಲ್ಲದಿದ್ದರೆ ಈ ಕಾರ್ಯ ನಡೆಯುತ್ತಿರಲಿಲ್ಲ.

ಚಲನಚಿತ್ರಗಳೂ ಬೈಗುಳಗಳ ಬೆಳವಣಿಗೆಗೆ ಕಾರಣವಾಗಿದೆ. ಕಾಗೆ ಹಾರಿಸುವುದು, ಡಗಾರ್, ಜೊಲ್ಲು, ಇತ್ಯಾದಿ ಪದಗಳ ಪರಂಪರೆಯನ್ನೇ ಸೃಷ್ಟಿಸಿ, ಜನಪ್ರಿಯಗೊಳಿಸಿದ ಹೀರೋಗಳ ಸಾಲುಸಾಲುಗಳೇ ನಮ್ಮಲ್ಲಿವೆ. ಒಳ್ಳೆಯ ಭಾಷೆ ಇಲ್ಲದಿದ್ದರೇನಂತೆ, ಕುಭಾಷೆಯಲ್ಲಿ ನಾವೇ ಪರಿಣಿತರು ಎಂಬ ಗೀತರಚನೆಕಾರರು, ಡೈಲಾಗ್ ಬರೆಯುವವರು ಕೆದರಿದ ಇರುವೆ ಗೂಡಿನಿಂದ ಹೊರಟ ಇರುವೆಗಳಂತೆ ಎಲ್ಲೆಲ್ಲೂ ಕಂಡುಬರುತ್ತಿದ್ದಾರೆ.

ಬೈಗುಳ ನಮ್ಮ ಪರಂಪರೆ ಎನ್ನುವುದಕ್ಕೆ ಮತ್ತೂ ಉದಾಹರಣೆಗಳಿವೆ. ಕೊಡಗಿನ ಪ್ರಾಂತ್ಯದಲ್ಲಿ ಒಂದು ವಿಶೇಷ ಹಬ್ಬದ ಸಂದರ್ಭದಲ್ಲಿ ಜನರು ತಮಗೆ ತಿಳಿದಿರುವ ಎಲ್ಲ ವಿಧದ ಬೈಗಳನ್ನು ಪರಸ್ಪರರ ಮೇಲೆ ಉಪಯೋಗಿಸುವುದು ಆ ಹಬ್ಬದ ಒಂದು ಪ್ರಮುಖ ಅಂಗ. ಆ ಹಬ್ಬಕ್ಕೆ ಹೋದರೆ ಅವರಿವರಿರಲಿ, ಪೊಲೀಸರಿಗೂ ಹೊಸ ಹೊಸ ಪದಗಳು ದೊರೆಯುವುವಂತೆ. ಅವರ ಬೈಗುಳದ ಭಾಷೆ ಅಷ್ಟು ಶ್ರೀಮಂತವಂತೆ. ಅವರಿವರ ಮಾತು ಹಾಗಿರಲಿ. ಶಿವರಾತ್ರಿಯ ಜಾಗರಣೆಯ ಸಂದರ್ಭದಲ್ಲಿ ಈಶ್ವರನಿಗೆ ನಿಂದಾಸ್ತುತಿಯ ಮೂಲಕ ಪೂಜೆ ಮಾಡಲಾಗುತ್ತದೆ. ಶುದ್ಧವಾದ ಪಾಂಡಿತ್ಯಪೂರ್ಣವಾದ ಸಂಸ್ಕೃತದಲ್ಲಿ ದೇವನಿಗೆ ನಿಂದೆಯ ಮೂಲಕ ಹೊಗಳಿಕೆ ಅನೂಚಾನವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯ.

ಇಷ್ಟೆಲ್ಲ ಐತಿಹ್ಯ ಇರುವ ಬೈಗುಳ, ನಿಂದೆ, ಉಗಿತ ಬಿಟ್ಟುಬಿಡಿ ಎನ್ನುವುದು ಅಕ್ಷಮ್ಯ ಅಪರಾಧ. ಉಗುಳೇಶ್ವರನಿಗೆ ಜೈ; ಉಗಿಯಬಾರದು ಎನ್ನುವವರಿಗೆ ಧಿಕ್ಕಾರ! ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಈ ಕಟ್ಟಡವು ಚುಮಚೊರಿನಲ್ಲಿರುವ ಶ್ರೀ ಸಿದ್ಧಾರ್ಥ ಕಾಂತ್ರಿಕ ಎಜ್ಞೆಎಡ್ಯಾನಿಲಯದ ಗ್ರಂಥಾಲಯ ಕಟ್ಟಡ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile

Contact Mr Sudheendra Rao EMAIL
Mobile 0415 291 723

choice HOME LOANS

Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.

Contact Mr Umesh EMAIL
Mobile 0401 034 456

AUSTINDIA SANGAM TRANSPORT

Contact Mr Eranna Gotyal EMAIL
Mobile 0404 215 605

ಕಥಾ ಚೆಲುಮೆ

ಗೌತಮ ಬುದ್ಧ

ಕನಕಾಪುರ ನಾರಾಯಣ

ಗೌತಮ ಬುದ್ಧನು ತನ್ನೊಡನೆ ಐನೂರು ಅನುಯಾಯಿಗಳನ್ನು ಕರೆದುಕೊಂಡು ವೈಶಾಲಿ ಎಂಬ ಪುಟ್ಟ ಹಳ್ಳಿಯ ಕಡೆಯಿಂದ ಹೊರಟಿದ್ದ. ಒಮ್ಮೆ ಹಿಂತಿರುಗಿ ಹಳ್ಳಿಯನ್ನು ನೋಡಿದ. ಅದನ್ನು ಕಂಡ ಒಬ್ಬ ಅನುಯಾಯಿ "ಯಾಕೆ ನೀವು ಆ ಹಳ್ಳಿಯಕಡೆ ನೋಡುತ್ತಿದ್ದೀರಿ? ಎಂದು ಪ್ರಶ್ನಿಸಿದ. ಅದಕ್ಕೆ ಗೌತಮ ಬುದ್ಧನು"ನಾವು ಆ ಹಳ್ಳಿಗೆ ಹೋಗಬೇಕು" ಎಂದ. "ಅರೆ ಆ ಹಳ್ಳಿ ಬಹಳ ಚಿಕ್ಕದು ಸ್ವಲ್ಪವೇ ಮನೆಗಳಿವೆ, ನಾವೆಲ್ಲಾ ಅಲ್ಲಿಗೆ ಹೋದರೆ ಕೂರುವುದಾದರೂ ಎಲ್ಲಿ?" ಎಂಬ ಪ್ರಶ್ನೆಗಳು ಕೇಳಿಬಂದರೂ, ಬುದ್ಧ ಮೌನವಾಗಿದ್ದು ನಂತರ "ನಡೆಯಿರಿ ವೈಶಾಲಿಯ ಕಡೆಗೆ" ಎಂದು ಆಜ್ಞೆ ಮಾಡಿದ. ಹಳ್ಳಿಯನ್ನು ಸಮೀಪಿಸುತ್ತಿದ್ದಂತೆ ಒಬ್ಬ ಯುವತಿ ಹೊಲದಲ್ಲಿದ್ದ ತನ್ನ ತಂದೆಗೆ ಊಟ, ನೀರು ಕೊಡಲು ಹೊರಟಿದ್ದಳು. ಬುದ್ಧನನ್ನು ಕಂಡವಳೇ ಅವನಿಗೆ ನಮಸ್ಕರಿಸಿ "ಸ್ವಾಮಿ ನಾನು ಹಿಂತಿರುಗಿ ಬರುವವರೆಗೂ ನೀವು ಪ್ರವಚನವನ್ನು ಆರಂಭ ಮಾಡಬೇಡಿ" ಎಂದು ಬೇಡಿದಳು.

ಹಳ್ಳಿಯ ಜನರಿಗೆ ಆಶ್ಚರ್ಯವೋ ಆಶ್ಚರ್ಯ. ಎಲ್ಲರೂ ಬುದ್ಧನನ್ನು ನೋಡಲು ದೂರದೂರುಗಳಿಂದ ಬಂದರೆ ಇಲ್ಲಿ ಬುದ್ಧನೇ ನಮ್ಮೂರಿಗೆ ಬಂದಿದ್ದಾನೆ ಎಂಬ ಆನಂದದಿಂದ ಊಟ ಉಪಚಾರಗಳನ್ನು ಬಲುಬೇಗ ಸಿದ್ಧ ಮಾಡಿದರು. ಎಲ್ಲ ಅನುಯಾಯಿಗಳೂ ಕೂರಲು ಸಾಕಾಗುವಷ್ಟು ಸ್ಥಳಾವಕಾಶವಾಯಿತು. ಹಳ್ಳಿಯ ಮುಖ್ಯಸ್ಥನು ಎದ್ದುನಿಂತು ಸ್ವಾಗತವನ್ನು ಕೋರಿ ಬುದ್ಧನಿಗೆ ಪ್ರವಚನ ಆರಂಭಿಸಲು ಕೋರಿದ. ಆದರೆ ಬುದ್ಧ ಸ್ವಲ್ಪ ಕಾಲ ಮಾತಾಡಲೇ ಇಲ್ಲ, ಎಲ್ಲೆಲ್ಲೂ ಮೌನ ಆವರಿಸಿತು, ತುಸು ಹೊತ್ತಿನ ಬಳಿಕ ಯುವತಿ ಓಡೋಡಿ ಬುದ್ಧನ ಮಾತು ಕೇಳಲು ಬಂದು ಕುಳಿತಳು. ತಕ್ಷಣ ಬುದ್ಧನ ಮುಖ ಕಮಲದಂತೆ ಅರಳಿತು, ತನ್ನ ಹಿತನುಡಿಗಳ ಉಪದೇಶವನ್ನು ಆರಂಭಿಸಿದ. "ನಾನು ಈ ಹಳ್ಳಿಗೆ ಬಂದದ್ದೇ ಈ ಯುವತಿಗಾಗಿ, ಆಕೆಗೆ ಆಧ್ಯಾತ್ಮದಲ್ಲಿರುವ ಇರುವ ಆಸಕ್ತಿ, ಆಸೆ ನನ್ನನ್ನೇ ಇಲ್ಲಿಗೆ ಬರಮಾಡಿತು. ಆಕೆಯೇ ನಿಜವಾದ ಅನುಯಾಯಿ" ಎಂದ. ಆಕೆಯಿಂದ ಇಡೀ ಹಳ್ಳಿಗೇ ಜ್ಞಾನೋದಯವಾಯಿತು. ನೀತಿ: ಯಾವ ವ್ಯಕ್ತಿಯು ವಿದ್ಯೆ ಜ್ಞಾನಗಳಿಗೆ ಬಾಯಾರಿಕೆಯಿಂದ, ಹಸಿವಿನಿಂದ, ಆಸೆಯಿಂದ, ಆಸಕ್ತಿಯಿಂದ ಕಾದು ಕಲಿಯುತ್ತಾರೋ ಅಂತವರು ನೀರಿನ ಬಳಿಗೆ ಹೋಗುವಷ್ಟಿಲ್ಲ ನೀರೇ ನದಿಯಾಗಿ ಅವರಿರುವಲ್ಲಿಗೆ ಹರಿದು ಬರುತ್ತದೆ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಗೋಡಂಬಿ ಟಾಫಿ

ಬೇಕಾಗುವ ಸಾಮಗ್ರಿಗಳು

- ಅರ್ಧ ಕೇಜಿ ಗೋಡಂಬಿ
- ಸಕ್ಕರೆ ಒಂದೂವರೆ ಕೇಜಿ
- ಏಲಕ್ಕಿ ಹತ್ತು, ನಾಲ್ಕು ಚಮಚ ತುಪ್ಪ

ಮಾಡುವ ವಿಧಾನ

- ಗೋಡಂಬಿಯನ್ನು ಸಣ್ಣ ಚೂರುಗಳನ್ನಾಗಿ ಮಾಡಿ ಬಾಣಲೆಯಲ್ಲಿ ಎರಡು ಚಮಚ ತುಪ್ಪ ಹಾಕಿ ಹುರಿದಿಟ್ಟುಕೊಳ್ಳಿ
- ಮತ್ತೊಂದು ಪಾತ್ರೆಯಲ್ಲಿ ಕಾಲು ಲೋಟ ನೀರು ಬೆರೆಸಿ ಸಕ್ಕರೆಯ ಉಂಡೆಪಾಕ (ಗಟ್ಟಿ) ಮಾಡಿಕೊಂಡು ಕೆಳಗಿಳಿಸಿ
- ಪಾಕಕ್ಕೆ ಗೋಡಂಬಿ, ಏಲಕ್ಕಿ ಪುಡಿ ಹಾಕಿ ಹದವಾಗಿ ಮೊಗಚಿ, ತಟ್ಟಿ.
- ಆರಿದಮೇಲೆ ಬಿಲ್ಲೆಗಳಾಗಿ ಕತ್ತರಿಸಿ ಬಡಿಸಿ. (ಆಡುವ ಮಕ್ಕಳಿಗಿದು ಶಕ್ತಿದಾಯಕ)

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಂದರ ಲ್ಲೊಂದು ಒಗಟು

೧.ಅನುಕ್ರಮವನ್ನು ಹೇಳುವ ಮೂರಕ್ಷರದ ಪದವಿದು
೨.ಮೊದಲೆರೆಡಕ್ಷರವು ಅಂಗನೆಯರ ಕುತ್ತಿಗೆಯನ್ನು ಅಲಂಕರಿಸುವುದು
೩.ಕೊನೆಯೆರಡು ಕೂಡಿದರೆ ಮನ್ಮಥನ ಮೋಹಿನಿಯಾಗುವಳು
೪.ಮೊದಲಿಗೆ ಕೊನೆಯಕ್ಷರ ಸೇರಿ ಹೆಂಡತಿ ಎನಿಸಿಕೊಳ್ಳುವಳು

ಉತ್ತರಕ್ಕೆ ಪುಟ ೧೦ ನೋಡಿ

ಬೆಳಕು ...

ಇರುಳನು ಸರಿಸಿ
ಬೆಳಕನು ಸುರಿಸಿ
ಕಣ್ ತೆರೆದನೊ ತರಣಿ
ನಗುವನು ಧರಿಸಿ
ಸೊಗವನು ಹರಿಸಿ
ಬೆಳಕುಟ್ಟಳು ಧರಣಿ

ಮರಗಳ ತೆಕ್ಕೆಯ
ಸುರ ಸ್ವರ ಹಕ್ಕಿಯು
ಹೊರ ಹಾರಿದೆ ಈಗ
ಕರುಮವನರಿತವ
ಮರುಮವನರಿತವ
ತೆರೆ ಸರಿಸೋ ಬೇಗ

ಬಿತ್ತರ ಬಾನಿಗೆ
ಬತ್ತದ ಕಡಲಿಗೆ
ಹತ್ತಿತೊ ಬಗೆ ಬಣ್ಣ
ಚಿತ್ತವ ಸೆಳೆದಿದೆ
ಸುತ್ತಲ ಹೂಗಳು
ಪತ್ತಲ ವನವಣ್ಣ

ಕಳೆಯಿತು ನಿನ್ನೆ
ಇಳಿವುದು ನಾಳೆ
ಬಾಳೆಂದರೆ ಇಂದು
ಜೀಕುವ ಪ್ರಾಣಕೆ
ಲೌಕಿಕ ಘ್ರಾಣಕೆ
ಆಳಾಗುವ ಬೆಂದು

ಬಲ್ಲವ ಅವನೇ
ಎಲ್ಲವು ಅವನೇ
ಸೊಲ್ಲಡಗಿಸೊ ನೀನು
ಸಲ್ಲಿಸೊ ಅವಗೆ
ಮಲ್ಲಿಗೆಯೊಂದ
ಅವನೆಲ್ಲಿದ್ದರೆ ಏನು?!

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಭಾರತದ ಉಪರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸಿ, ಹಲವು ತಿಂಗಳುಗಳ ಕಾಲ ಹಂಗಾಮಿ ರಾಷ್ಟ್ರಪತಿಗಳಾಗಿದ್ದವರು ಯಾರು? ಅವರ ಪೂರ್ಣ ಹೆಸರನ್ನು ತಿಳಿಸಿ.

೨. ಡಾ || ಎ. ಪಿ. ಜೆ. ಅಬ್ದುಲ್ ಕಲಾಂ ಅವರು ಬೆಂಗಳೂರಿನಲ್ಲಿ ತರಬೇತಿಗಾಗಿ ಸೇರಿದ ಸಂಸ್ಥೆ ಯಾವುದು. ಮತ್ತು ಅವರು ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದ ಸಂಸ್ಥೆ ಯಾವುದು?

ಸರಿ ಉತ್ತರಕ್ಕೆ ಪುಟ ೨೨ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ಸರತಿ ೨. ಸರ ೩.ರತಿ ೪. ಸತಿ

ಹಾಸ್ಯ ಚಿಲುಮೆ

ತಂದೆ: ಯಾವೋನೋ ಅವ್ನು ಲೆಕ್ಕದಲ್ಲಿ ನೂರಕ್ಕೆ ಹತ್ತೇ ಹತ್ತೆ?ಎಲ್ಲಿದಾನೋ ಅವ್ನು!

ಮಗ: ಅದೇ ನಾನೂ ಕೇಳ್ಬೇಕೂ ಅಂದ್ಕೊಂಡೆ, ನಡಿರೀಪ್ಪ ನಂಗೊತ್ತು ಮೇಷ್ಟ್ರ ಮನೆ.

■ ಬೀಚಿ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಗೆಲುವು ಸಾಧಿಸಬೇಕೆಂದರೆ ಮರಳಿ ಮರಳಿ ಮಾಡಬೇಕಾದ್ದು?

೨. ಮಳೆಗಿಂತ ಹೆಚ್ಚಾಗಿ ಗುಡುಗು ಸಿಡಿಲಿನದೇ ಹೆಚ್ಚಾದ ?

೩. ಸುತ್ತುತ್ತಾ ಸುತ್ತುತ್ತಾ ಸುಯ್ಯೆಂದು ಬಂದು, ಸಿಕ್ಕಿದ್ದನ್ನೆಲ್ಲಾ ಮೇಲಕ್ಕೆ ಹಾರಿಸಿಕೊಂಡು ಹೋದ ವಾಯು.

೪. ನಾಮಾಮೃತ ತುಂಬ ಬೇಕಾದ ಮಾತು.



೫.ಬೆಟ್ಟಗುಡ್ಡಗಳು, ಅರ್ಕಾವತಿ ನದಿ, ಜೊತೆಗೆ ಮಾವಿನ ಹಣ್ಣು ಎಂದಾಗ, ನೆನಪಿಗೆ ಬರುವ ಜಿಲ್ಲೆ?



೬. ಭೂತಾಯಿಯ ಮೇಲೆ ಕುಳಿತು ನಡೆಸುವ ಮುಷ್ಕರ.



ಉತ್ತರ: ಒಡಲಾಳದಲ್ಲಿ ಅಮೂಲ್ಯವಾದ ಸಂಪತ್ತನ್ನಿರಿಸಿಕೊಂಡ ಭೂಮಾತೆಯೇನು ಈಕೆ?



ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಆಗಸ್ಟ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜುಲೈ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ರಾಘವೇಂದ್ರ ಮೂರ್ತಿ, ಬೆಂಗಳೂರು
- ಸುಶೀಲ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್
- ಹರಿಣಿ ರಾವ್, ನವದೆಹಲಿ

ಜುಲೈ ತಿಂಗಳ ಪದಪುಂಜದ ಉತ್ತರ

೧. ಅಕ್ಕನ ಗಂಡನನ್ನು ಮೊಟಕುಗೊಳಿಸುವ ಸಾಧ್ಯತೆ.

ಸಂ	ಭ	ವ

೨. ಆಹಾ! ಅಂತಿಂತಹುದು ಇದಲ್ಲ, ಇದರಂತಹುದು ಬೇರಿಲ್ಲ.

ಅ	ನ	ನ್ಯ

೩. ರಸಗಳಿಗೆಯಲ್ಲಿ ಏಕೆ ಈ ಮನಸ್ತಾಪ.

ವಿ	ರ	ಸ

೪. ಮೋಹಿನಿ ಭಸ್ಮಾಸುರ ಶಿಖರಗಳಿರುವ ಸೊಬಗಿನ ತಾಣ.

ಯಾ	ಣ

೫.ಭಕ್ತವತ್ಸಲನಲ್ಲಿ ತುಂಬಿರಬೇಕಾದ ಭಾವ.

ಕಾ	ರು	ಣ್ಯ

೬. ಚಪಾತಿ ಮಾಡಲು ಬಾರದೆ ಪಟ್ಟ ಪಾಡಿಗೆ, ಹೀಗೆನ್ನುವುದೇ ಸರಿ.

ಪ	ಜೇ	ತಿ

ಉತ್ತರ: ಅಳಿವಿನಂಚಿನಲ್ಲಿರುವ ಕಾಡು ಪ್ರಾಣಿಗಳು, ನಿರ್ಭೀತಿಯಿಂದ ಇಲ್ಲಿರಬಹುದೇನು?

ವ	ನ್ಯ	ಜೇ	ವಿ	ಅ	ಭ	ಯಾ	ರ	ಣ್ಯ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852



ಲಕ್ಷ್ಮೀ ಮಂಟಪ - ೧೫ - ೧೫ - ರಚನೆ - ಶ್ರೀವಿದ್ಯಾ ಮಧುಸೂದನ್ , ಬೆಂಗಳೂರು

ಲೇಖಕರು: ನಾಗಶೈಲ ಕುಮಾರ್

ಕೆಳದಿಯ ಚೆನ್ನಮ್ಮ – ಭಾಗ ೨

ರಾಣಿಯಾಗಿ ಅಧಿಕಾರ ವಹಿಸಿಕೊಂಡ ಚೆನ್ನಮ್ಮ, ಶತೃಗಳಿಂದ ರಾಜಧಾನಿಯನ್ನು ವಶಪಡಿಸಿಕೊಳ್ಳಲು ಹೋರಾಡಿದ ಸೈನಿಕರಿಗೆ, ಸೇನಾಧಿಕಾರಿಗಳಿಗೆ ಕಾಣಿಕೆಯಿತ್ತು ಗೌರವಿಸಿದಳು. ತನಗೆ ಬೆಂಬಲವಾಗಿ ನಿಂತು ಹುರಿದುಂಬಿಸಿ, ಸಹಾಯ ನೀಡಿದ ಅಧಿಕಾರಿಗಳಿಗೆ ಉನ್ನತ ಹುದ್ದೆಗಳನ್ನು ನೀಡಿ ನ್ಯಾಯ ಸಲ್ಲಿಸಿದಳು. ಇಷ್ಟು ದಿನಗಳ ಗೊಂದಲಗಳಲ್ಲಿ ಬಡವಾಗಿದ್ದ ರಾಜ್ಯದ ವ್ಯವಸ್ಥೆಯನ್ನು ಸುಸ್ಥಿತಿಗೆ ಮರಳಿ ತರುವ ಕಾಯಕವನ್ನು ಕೈಗೊಂಡಳು. ಕೆಳದಿವಂಶದ ಶ್ರೇಷ್ಠ ಅರಸು ಶಿವಪ್ಪನಾಯಕರು ಹಾಕಿದ್ದ ಮಾರ್ಗವನ್ನು ಅನುಸರಿಸಿ ರಾಜ್ಯದ ಅಭಿವೃದ್ಧಿಗೆ ಮುಂದಾದಳು. ತಮ್ಮ ರಾಜ್ಯದಲ್ಲೇ ಇದ್ದು ಒಳಸಂಚು ಹೂಡಿ ರಾಜ್ಯವನ್ನು ಅವನತಿಗೆ ಕಾರಣನಾಗಿದ್ದ ಭರಮೆ ಮಾವುತ ಹಾಗೂ ಜನ್ನೋಪಂತನಿಗೆ ಮರಣದಂಡನೆ ಶಿಕ್ಷೆ ವಿಧಿಸಿದಳು.

ರಾಣಿ ಕಿರಿಯಳಾದರೂ ಸಮರ್ಥ ಆಡಳಿತ ನೀಡುವಲ್ಲಿ ತೋರುತ್ತಿದ್ದ ಬುದ್ಧಿವಂತಿಕೆ, ರಾಜ್ಯದ ಏಳಿಗೆಗಾಗಿ ಹಗಲಿರುಳೂ ಪಡುತ್ತಿದ್ದ ಶ್ರಮ ಪ್ರಧಾನಿಗಳನ್ನು ಮೂಕ ವಿಸ್ಮಿತರನ್ನಾಗಿಸಿತ್ತು.

" ತಾಯಿ ಈ ರಾಜ್ಯದ ಜನತೆ ನಿಜವಾಗಲೂ ಪುಣ್ಯ ಮಾಡಿದ್ದಾರೆ, ರಾಜ್ಯಕ್ಕೆ ಕವಿದಿದ್ದ ಕಾರ್ಮೋಡವನ್ನು ತೊಲಗಿಸಿದ ದೇವತೆಯಾಗಿ, ಕಂಗಾಲಾಗಿದ್ದ ಜನತೆಗೆ ಸಾಂತ್ವನ ನೀಡುವ ತಾಯಿಯಾಗಿ, ನೀವು ಜನತೆಯ ಮನವನ್ನು ಗೆದ್ದಿದ್ದೀರಿ"

"ನಿಮ್ಮೆಲ್ಲರ ಬೆಂಬಲವಿಲ್ಲದಿದ್ದರೆ ನನ್ನಿಂದ ಏನೂ ಸಾಧ್ಯವಿರುತ್ತಿರಲಿಲ್ಲ ಪ್ರಧಾನಿಗಳೆ. ಮತ್ತು ರಾಮೇಶ್ವರ, ಅಘೋರೇಶ್ವರ ಮತ್ತು ಮಾತೆ ಮೂಕಾಂಬಿಕೆಯ ಕೃಪೆಯೂ ನಮಗಿತ್ತು. ಪ್ರಧಾನಿಗಳೆ, ಈ ಎಲ್ಲ ದೇವಳಗಳಲ್ಲಿ ನಿರಂತರ ಪೂಜೆಗಳಿಗೆ ಅನುಕೂಲ ಕಲ್ಪಿಸಿ, ದೇವತೆಗಳಿಗೆ ಚಿನ್ನಾಭರಣಗಳನ್ನೂ ಪ್ರಭಾವಳಿ, ದೀಪಸ್ತಂಭಗಳನ್ನು ಮಾಡಿಸಲು ಏರ್ಪಾಡು ಮಾಡಿ."

"ಮತ್ತೊಂದು ಆಸೆಯಿದೆ ನನಗೆ, ಶಿವೈಕ್ಯರಾದ ಮಹಾರಾಜ ಸೋಮಶೇಖರನಾಯಕರ ನೆನಪಿನಲ್ಲಿ ಅಗ್ರಹಾರವನ್ನು ನಿರ್ಮಿಸಿ, ಅಲ್ಲಿ ವಿದ್ವಾಂಸರಿಗೆ ವಸತಿಗಳನ್ನು ಕಲ್ಪಿಸಿಕೊಡಬೇಕೆಂದು. ಅದಕ್ಕೆ ನಿಮ್ಮ ಸಲಹೆ, ಸಹಕಾರ ಅತ್ಯಗತ್ಯ, ನೀವೇನು ಹೇಳುತ್ತೀರಿ".

"ಅತ್ಯಗತ್ಯವಾಗಿ ತಾಯಿ, ನನ್ನನ್ನು ಕೇಳುವ ಅಗತ್ಯವೇ ಇಲ್ಲ, ರಾಜ್ಯದ ಅಭ್ಯುದಯ ಕಾರ್ಯಗಳು ನಿರಂತರ ನಡೆಯುತ್ತಿರಬೇಕೆಂಬುದೇ ನನ್ನಿಚ್ಛೆಯೂ ಸಹ". ಹೀಗೆ ರಾಣಿ ಮತ್ತು ಪ್ರಧಾನಿಗಳ ಜೋಡಿ ರಾಜ್ಯಕ್ಕೊಂದು ವರದಾನವಾಗಿತ್ತು.

****

ಕೆಳದಿ ಸಂಸ್ಥಾನಕ್ಕಿದ್ದ ದೀರ್ಘವಾದ ಕಡಲತೀರ ಮತ್ತು ಅದರ ಸ್ವಾಭಾವಿಕ ಬಂದರುಗಳು ಪರಂಗಿಗಳೊಡನೆ ವ್ಯಾಪಾರ ನಡೆಸಲು ಉತ್ತಮ ಅವಕಾಶ ಕಲ್ಪಿಸಿತ್ತು. ಇದರಿಂದಾಗಿ ಕೆಳದಿಗೆ ಉತ್ತಮ ಆದಾಯವಿದ್ದು, ಜೊತೆಗೆ ಮಲೆನಾಡಿನ ಅರಣ್ಯಗಳಲ್ಲಿ ದೊರೆಯುವ ಸಂಪತ್ತೂ ಸೇರಿ ರಾಜ್ಯ ಸಂಪದ್ಭರಿತವಾಗಿತ್ತು. ಇಂತಹ ಆದಾಯದ ಮೂಲಗಳಿಲ್ಲದ ಮೈಸೂರು, ಹಾಗೂ ಇತರ ಸಣ್ಣಪುಟ್ಟ ಸಂಸ್ಥಾನಗಳವರು ಕೆಳದಿಯನ್ನು ವಶಪಡಿಸಿಕೊಳ್ಳುವ ಅವಕಾಶಕ್ಕಾಗಿ ಹೊಂಚು ಹಾಕುತ್ತಿದ್ದರು.

ಅಂಧಕ ವೆಂಕಟ ನಾಯಕನೆಂಬ ಕೆಳದಿ ವಂಶಸ್ಥನೊಬ್ಬ "ಕೆಳದಿ ಸಿಂಹಾಸನ ನ್ಯಾಯವಾಗಿ ನನಗೆ ದೊರಕಬೇಕಾದ್ದು. ನೀವು ನನಗೆ ಅದನ್ನು ವಶಪಡಿಸಿಕೊಳ್ಳಲು ಸಹಾಯ ನೀಡಿದರೆ, ಅದರ ಅರ್ಧ ಭಾಗವನ್ನು ನಿಮಗೆ ನೀಡುತ್ತೇನೆ" ಎಂದು ಮೈಸೂರಿನ ದೊರೆ ಚಿಕ್ಕದೇವರಾಯನಿಗೆ ಪತ್ರ ಬರೆದ. ಆ ಚಿಕ್ಕ ಸಂಸ್ಥಾನವನ್ನು ಗೆಲ್ಲುವುದೇನು ಕಷ್ಟ ಎಂದುಕೊಂಡು ಚಿಕ್ಕದೇವರಾಯ ಚೆನ್ನಮ್ಮನ ಮೇಲೆ ಯುದ್ಧ ಸಾರಿದ. ಮೇಲೆ ಮೇಲೆ ನಡೆದ ಯುದ್ಧಗಳಲ್ಲಿ ಚೆನ್ನಮ್ಮ ಒಂದು ಸಲ ಸೋಲನ್ನನುಭವಿಸಿದರೂ, ಕಡೆಗೆ ಮೈಸೂರಿನ ಸೈನ್ಯವನ್ನು ಹೊಡೆದೋಡಿಸುವಲ್ಲಿ ಯಶಸ್ವಿಯಾದಳು. ಅಷ್ಟೇ ಅಲ್ಲ ಕಿರುಕುಳ ನೀಡುತ್ತಿದ್ದ, ಸಿರ್ಸಿ, ಸೋದೆ ಮತ್ತು ಬನವಾಸಿಯ ನಾಯಕರುಗಳ ಸದ್ದಡಗಿಸಿದಳು. ಯುದ್ಧದಲ್ಲಿ ಸೆರೆಯಾಗಿದ್ದ ಮೈಸೂರಿನ ಅಧಿಕಾರಿಗಳನ್ನು ಬಿಡುಗಡೆಗೊಳಿಸಿ, ಗೌರವಪೂರ್ವಕವಾಗಿ ಕಳುಹಿಸಿಕೊಟ್ಟಳು. ಇದರಿಂದ ಸಂತುಷ್ಟನಾದ ಮೈಸೂರಿನ ದೊರೆ ಕೆಳದಿಯೊಡನೆ ಶಾಂತಿಯ ಒಪ್ಪಂದ ಮಾಡಿಕೊಂಡ.

ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿ 'ಬಸಪ್ಪ ನಾಯಕ' ಎಂಬ ಬಾಲಕನನ್ನು ತನ್ನ ಹಿತಚಿಂತಕರ ಅನುಮತಿಯೊಡನೆ ದತ್ತು ಪಡೆದಳು. ಸ್ವತಃ ಮುತುವರ್ಜಿಯಿಂದ ಪ್ರತಿದಿನ ಬೆಳಗಿನ ಸಮಯದಲ್ಲಿ ಬಾಲಕನಿಗೆ ತರಬೇತಿ ನೀಡುವಲ್ಲಿ ನಿಂತು ವೀಕ್ಷಿಸುತ್ತಿದ್ದಳು. ರಾಜಕಾರಣ, ಶಸ್ತ್ರಾಸ್ತ್ರ, ವಾಣಿಜ್ಯ ವ್ಯವಹಾರಗಳು, ಧಾರ್ಮಿಕ, ಕಲೆ ಹೀಗೆ ಎಲ್ಲಾ ವಿಷಯಗಳಲ್ಲೂ ಬಸಪ್ಪನಾಯಕನು ಪರಿಣಿತಿ ಪಡೆವಂತೆ ಏರ್ಪಾಡು ಮಾಡಿ, ರಾಜ್ಯಕ್ಕೆ ಮುಂದೆ ಒಬ್ಬ ಸಮರ್ಥ ರಾಜನ ತಯಾರಿಯನ್ನು ನಡೆಸಿದಳು.

****

ರಾಣಿಯ ಸತ್ವ ಪರೀಕ್ಷೆ

ರಾಣಿಯ ಆಸ್ಥಾನಕ್ಕೆ ನಿತ್ಯವೂ ಹಲವಾರು ಅಹವಾಲುಗಳನ್ನು ಹೊತ್ತು ಅನೇಕರು ಬರುತ್ತಿದ್ದರು. ಆದರೆ ಅಂದು ಬಂದ ನಾಲ್ವರಲ್ಲಿ ಏನೋ ಪ್ರತ್ಯೇಕತೆಯಿತ್ತು. ಅವರಲ್ಲಿ ಒಬ್ಬರಂತೂ ಜನಸಾಮಾನ್ಯರಂತೆ ಕಾಣದೆ, ಮುಖದಲ್ಲಿ ತುಂಬಿದ್ದ ತೇಜಸ್ಸು, ನಡೆಯಲ್ಲಿನ ಗಾಂಭೀರ್ಯ, ರಾಣಿಯಲ್ಲಿ ಆಸಕ್ತಿ ಮೂಡಿಸಿತು.

ಮುಂದಿನ ಪುಟ ನೋಡಿ ...

“ಶರಣು ಮಹಾತ್ಮರಿಗೆ, ತೇಜೋವಂತರಾದ ತಾವು ಸಾಮಾನ್ಯರಲ್ಲವೆಂದು ನನ್ನ ಮನಸ್ಸು ಹೇಳುತ್ತಿದೆ. ತಾವು ಯಾರು, ನಿಮಗೆ ನನ್ನಿಂದ ಆಗಬೇಕಾದುದಾದರೂ ಏನು, ದಯಮಾಡಿ ತಿಳಿಸಿದರೆ, ಅದು ನನ್ನ ಭಾಗ್ಯವೆಂದು ತಿಳಿದು ನಡೆಸುತ್ತೇನೆ”. ಎಂದು ಕುತೂಹಲದಿಂದ ನುಡಿದಳು.

“ಅಹುದು ರಾಣಿ ಚೆನ್ನಮ್ಮಾಜಿ, ನಿಮ್ಮ ಊಹೆ ಸರಿಯೇ, ನಾನು ಅಸಾಮಾನ್ಯನೇನು ಅಲ್ಲದಿದ್ದರೂ, ನಿಮ್ಮಿಂದ ಸಹಾಯ ಕೋರಿ ಬಂದಿರುವ, ಅಸಾಹಾಯಕ ಪರಿಸ್ಥಿತಿಯಲ್ಲಿರುವ ರಾಜಾರಾಮ, ಶಿವಾಜಿ ಮಹಾರಾಜರ ಮಗ ನಾನು”.

ರಾಣಿ ದಿಗ್ಭ್ರಾಂತಳಾಗಿ “ ಛತ್ರಪತಿ ಶಿವಾಜಿ ಮಹಾರಾಜರ ಮಗನೇನು ತಾವು? ಈ ರೀತಿ ವೇಷ ಮರೆಸಿಕೊಂಡು ಇಲ್ಲಿಯವರೆವಿಗೂ ಬರುವಂತಹ ಸ್ಥಿತಿಯಾದರೂ ತಮಗೆ ಏಕೆ ಬಂತು? ಹೇಳಿ ಇಂತಹ ಸ್ಥಿತಿಯಲ್ಲಿ ನಿಮಗೆ ನಾನು ಯಾವ ರೀತಿ ಸಹಾಯ ನೀಡಬಲ್ಲೆ?” ಎಂದವಳು, “ಮೊದಲು ನೀವು ವಿಶ್ರಮಿಸಿ ನಿಮ್ಮ ದಣಿವಾರಿಸಿಕೊಳ್ಳಿ, ನಂತರ ಪ್ರಧಾನಿ, ಅಪ್ಪಾಜಿ, ಹಾಗೂ ಇತರ ಹಿರಿಯರನ್ನೂ ಸೇರಿಸುತ್ತೇನೆ” ಎಂದು ರಾಜಾರಾಮನ ಪರಿಸ್ಥಿತಿಯನ್ನು ಅರಿತು ನುಡಿದಳು.

ವಿಚಾರ ಗಹನವಾದುದೇ ಇರಬೇಕೆಂದು ಪ್ರಧಾನಿ ತಿಮ್ಮಪ್ಪ ನಾಯಕ, ರಾಣಿಯ ತಂದೆ ಸಿದ್ದಪ್ಪ ಶೆಟ್ಟಿ, ಮಂತ್ರಿ ನರಸಪ್ಪಯ್ಯ, ಸೈನ್ಯಾಧಿಕಾರಿ ಭದ್ರಪ್ಪ, ಮಂತ್ರಿ ನರಸಪ್ಪಯ್ಯ, ಮುಂತಾದ ಹಿರಿಯರ ಸಭೆ ಸೇರಿಸಿದಳು ಚೆನ್ನಮ್ಮ.

ದೆಹಲಿಯ ಸುಲ್ತಾನ ಔರಂಗಜೇಬನ ದುರಾಡಳಿತದ ವಿರುದ್ಧ ಮೆಟ್ಟಿ ನಿಂತವರಲ್ಲಿ ಮರಾಠರ ಮಹಾರಾಜ ಛತ್ರಪತಿ ಶಿವಾಜಿ ಪ್ರಮುಖ ದೊರೆ. ಮುಸಲ್ಮಾನರ ಆಡಳಿತದ ವಿರುದ್ಧ ಕಿಡಿಕಾರಿ, ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸುವುದೇ ಶಿವಾಜಿಯ ಗುರಿಯಾಗಿ, ಅದರಲ್ಲಿ ಸಾಕಷ್ಟು ಯಶಸ್ಸನ್ನೂ ಕಂಡಿದ್ದ. ಅವನ ನಿಧನದ ನಂತರ ಅವನ ಮಕ್ಕಳಾದ ಸಾಂಬಾಜಿ, ರಾಜಾರಾಮರೂ ತಂದೆಯ ಹೋರಾಟವನ್ನು ಮುಂದುವರೆಸಿದ್ದರು.

ಶಿವಾಜಿಯ ಹಿರಿಯ ಮಗ ಸಾಂಬಾಜಿಯನ್ನು ಕುತಂತ್ರದಿಂದ ಸೆರೆಹಿಡಿದಿದ್ದ ಔರಂಗಜೇಬ. ಮುಸಲ್ಮಾನ ಧರ್ಮಕ್ಕೆ ಮತಾಂತರ ಹೊಂದಿದರೆ ಬಂಧನದಿಂದ ಬಿಡುಗಡೆಗೊಳಿಸಿ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುವುದಾಗಿ ಔರಂಗಜೇಬನು ಸಾಂಬಾಜಿಗೆ ಹೇಳಿದ. ಇದಕ್ಕೊಪ್ಪದ ಸಾಂಬಾಜಿಯನ್ನು ಕ್ರೂರವಾಗಿ ಕೊಲ್ಲಿಸಿದ. ನಂತರ ರಾಜ್ಯಭಾರ ವಹಿಸಿಕೊಂಡ ರಾಜಾರಾಮನನ್ನೂ ಸೆರೆ ಹಿಡಿಯಲು ತನ್ನವರನ್ನು ಕಳೂಹಿಸಿದ ಔರಂಗಜೇಬ್. ಹಿತೈಷಿಗಳ ಸಲಹೆಯಂತೆ ಔರಂಗಜೇಬನಿಂದ ತಪ್ಪಿಸಿಕೊಳ್ಳಲು ರಾಜಾರಾಮನು ವೇಷ ಮರೆಸಿಕೊಂಡು ತನಗೆ ಆಪ್ತರಾದ ಮಿತ್ರರೊಡನೆ ಸುರಕ್ಷಿತ ಸ್ಥಳವನ್ನರುಸುತ್ತಾ ಕೆಳದಿಗೆ ಬಂದಿದ್ದ.

"ತಾಯಿ, ನೆಲೆಯಿಲ್ಲದವನಾಗಿ ನಿಮ್ಮ ಆಶ್ರಯ ಸಹಾಯ ಕೋರಿ ಬಂದಿದ್ದೇನೆ, ನಾನೊಂದು ಸುರಕ್ಷಿತ ಸ್ಥಳ ಸೇರುವವರೆವಿಗೂ ನನಗೆ ಆಶ್ರಯವಿತ್ತು, ಸಹಾಯ ನೀಡಬೇಕೆಂದು ಕೋರುತ್ತೇನೆ".

"ಚಿಂತಿಸದಿರಿ ಮಹಾರಾಜ, ನೀವೊಮ್ಮೆ ಕೆಳದಿಯ ಆಶ್ರಯ ಕೋರಿದಿರೆಂದರೆ ತೀರಿತು, ನಿಮಗಿನ್ಯಾವ ಭಯವೂ ಇಲ್ಲ. ತನ್ನಲ್ಲಿ ಆಶ್ರಯವಾಗಲೀ, ಸಹಾಯವಾಗಲೀ ಕೋರಿ ಬಂದವರಿಗೆ, ಇದುವರೆವಿಗೂ ಕೆಳದಿ ಸಂಸ್ಥಾನದಲ್ಲಿ ನಿರಾಶೆಯಾದುದಿಲ್ಲ".

"ಆದರೆ ತಾಯಿ ಔರಂಗಜೇಬನನ್ನು ನೀವು ಎದುರು ಹಾಕಿಕೊಳ್ಳ ಬೇಕಾಗುತ್ತದೆ. ನಾನು ವೇಷ ಮರೆಸಿ ಹೊರಟಾಗಿನಿಂದಲೂ ಅನೇಕ ಹಿಂದೂ ಸಂಸ್ಥಾನಗಳ ನೆರವನ್ನು ಯಾಚಿಸಿದೆ. ಅವರಲ್ಲಿ ಅನೇಕ ಸಾಕಷ್ಟು ಬಲಿಷ್ಠ ರಾಜರುಗಳೇ ಇದ್ದರು. ಆದರೆ ಔರಂಗಜೇಬನ ಭೀತಿಯಿಂದಾಗಿ ನೆರವನ್ನೀಯಲು ನಿರಾಕರಿಸಿದರು. ನೀವು ನನಗೆ ಯಾವುದೇ ಸಹಾಯ ನೀಡುವ ಮುನ್ನ ಸಾಕಷ್ಟು ಯೋಚಿಸಿ. ಬೇಕಿದ್ದಲ್ಲಿ ನಾನು ಇಲ್ಲಿಗೆ ಬಂದಿದ್ದ ಸುಳಿವೇ ಇಲ್ಲದಂತೆ ಹೊರಟು ಬಿಡುತ್ತೇನೆ, ಆದರೆ ನಿಮಗೆ ತೊಂದರೆಯಾಗುವುದು ಬೇಡ".

"ಹಿಂದೂ ಸಾಮ್ರಾಜ್ಯದ ಉಳಿವಿಗಾಗಿ ಹೋರಾಡಿದ ಧೀರ ವ್ಯಕ್ತಿ ಶಿವಾಜಿ ಮಹಾರಾಜರು. ಅವರ ಮಕ್ಕಳಿಗೇ ನೆರವು ನೀಡದಷ್ಟು ಬಲಹೀನರೂ, ಕೃತಘ್ನರೂ, ಆದುವೇ ನಮ್ಮ ಹಿಂದೂ ಸಂಸ್ಥಾನಗಳು?" ಚೆನ್ನಮ್ಮ ಕನಲಿದಳು, "ಆದರೆ ಈ ಕೆಳದಿ ಸಂಸ್ಥಾನ ಉಳಿದ ಸಂಸ್ಥಾನಗಳಂತಲ್ಲ ಎಂದು ಮರೆಯದಿರಿ. ನಿಮಗೆ ನನ್ನಿಂದ ಯಾವುದೇ ಸಹಾಯಬೇಕಾದರೂ ಚಿಂತಿಸದೆ ಕೇಳಿ. ಅದನ್ನು ಈಡೆರಿಸಲು ನಾನು ಯಾವ ತೊಂದರೆಯನ್ನಗಲೀ ಎದುರಿಸಲು ಸಿದ್ಧ".

ಆದರೆ ಪ್ರಧಾನಿ ಹಾಗೂ ಉಳಿದ ಹಿರಿಯರು ಸಿದ್ಧರಿರಲಿಲ್ಲ. ರಾಣಿಗೆ ಔರಂಗಜೇಬನ ಶಕ್ತಿಯನ್ನು ವಿವರಿಸಿದರು, ಅವನ ಅಪಾರ ಸೇನಾಬಲ, ಅವನ ಕ್ರೂರತನ, ಅವನ ಎಂಜಲು ಕಾಸಿಗಾಗಿ ಕೈಚಾಚಿ ತಮ್ಮವರ ಬೆನ್ನಿಗೇ ಚೂರಿ ಹಾಕುವ ಪಿತೂರಿಗಾರರ ಬಗ್ಗೆ ಹೇಳಿದರು. ಅವನಿಂದ ಸೋಲಾದರೆ ಕೆಳದಿ ಸಾಮ್ರಾಜ್ಯವು ಎದುರಿಸ ಬೇಕಾಗುವ ಸಾವು ನೋವುಗಳ ಬಗ್ಗೆ ವಿವರಿಸಿದರು. ಅಂತಹ ಮಹಾನ್ ಮರಾಠಾ ಸಾಮ್ರಾಜ್ಯವೇ ಔರಂಗಜೇಬನ ಕೈ ವಶವಾಗಿರುವಾಗ, ರಾಜ್ಯವೇ ಇಲ್ಲದ ರಾಜನನ್ನು ಉಳಿಸಹೋಗಿ ಕೆಳದಿ ಸಂಸ್ಥಾನವೇ ನಿರ್ನಾಮವಾಗಿ ಬಿಡಬಹುದೆಂದು ಎಚ್ಚರಿಸಿದರು.

ಯಾರ ಎಚ್ಚರಿಕೆಯ ನುಡಿಗಳೂ ರಾಣಿಯ ಮೇಲೆ ಪರಿಣಾಮ ಬೀರಲಿಲ್ಲ.

ಮುಂದಿನ ಪುಟ ನೋಡಿ ...

ಸ್ವತಃ ರಾಜಾರಾಮನೇ , ಆಶ್ರಯ ಬೇಡಿ ಬಂದವನಾದರೂ ರಾಣಿಗೆ ಇರುವ ಸತ್ಯವನ್ನು ಅರುಹುದೊಳ್ಳೆಯದೆಂದು, ತನ್ನಣ್ಣ ಸಾಂಬಾಜಿಯೂ ಅವನ ಸ್ನೇಹಿತನೂ ಬಾದಶಹನ ಸೆರೆಯಾಳುಗಳಾಗಿ ಅನುಭವಿಸಿದ ಕ್ರೂರ ಹಿಂಸೆಯನ್ನು ಅಲ್ಲಿದ್ದವರಿಗೆ ವಿವರಿಸಿದ. ಕೇಳಿ ಅಲ್ಲಿದ್ದವರ ಎದೆ ನಡುಗಿತು, ಎಲ್ಲರೂ ರಾಣಿಯ ಮುಖ ನೋಡಿದರು, ಅಲ್ಲಿ ಬದಲಾವಣೆಯ ಸುಳಿವೂ ಕಾಣಲಿಲ್ಲ, ಭೀತಿಯ ಛಾಯೆಯೂ ಇರಲಿಲ್ಲ. ಎಲ್ಲರೂ ಚೆನ್ನಮ್ಮಳ ಉತ್ತರಕ್ಕೆ ಕಾಯುತ್ತಿದ್ದರು.

"ದಿಲ್ಲಿಯ ಔರಂಗಜೇಬನು ಮುನಿದು ನನ್ನ ರಾಜ್ಯವನ್ನು ತೆಗೆದುಕೊಂಡರೂ ಸರಿಯೆ, ನಮ್ಮ ಮೊರೆಹೊಕ್ಕಿ ಬಂದವರ ಕೈ ಬಿಡುವುದು ನಮ್ಮ ಧರ್ಮವಲ್ಲ", ಎಂದು ದೃಢಚಿತ್ತಳಾಗಿ ನುಡಿದಳು.ಅವಳ ನುಡಿಯನ್ನು ಕೇಳಿ ಹಿರಿಯರೆಲ್ಲರೂ ದಿಗ್ಭ್ರಾಂತರಾಗಿ ಮೌನವಾಗಿ ಕುಳಿತರೆ, ಯುವರಾಜ ಬಸಪ್ಪನಾಯಕ ಮತ್ತು ಇತರ ಯುವಪೀಳಿಗೆಯ ಸಭಾಸದರು ಹೆಮ್ಮೆಯಿಂದ ತಮ್ಮ ಬೆಂಬಲ ಸೂಚಿಸಿದರು.

ರಾಜಾರಾಮನು ಗದ್ಗದಿತನಾಗಿ "ಚೆನ್ನಮ್ಮಾಜಿ, ನೀವು ನನ್ನ ಪಾಲಿನ ದೇವತೆಯೇ ಸರಿ", ಎಂದು ಪ್ರಣಾಮಗೈದ. ರಾಜಾರಾಮನು ಶಿವಮೊಗೆಯ ಮಾರ್ಗವಾಗಿ ಕಳಸ, ಖಾಂಡ್ಯ ಗಳನ್ನು ಹಾದು ಚಂದಿಯಗಡವನ್ನು ಸುರಕ್ಷಿತವಾಗಿ ತಲುಪುವಂತೆ, ಚೆನ್ನಮ್ಮನು ಸಕಲ ಏರ್ಪಾಡುಗಳನ್ನು ಮಾಡಿದಳು. ನಂಬಿಕಸ್ತರಾದ ಜನರೊಡನೆ ಮಾತ್ರ ವಿಷಯವನ್ನು ತಿಳಿಸಿ, ಗೋಪ್ಯವಾಗಿ ನಡೆದ ಕಾರ್ಯಾಚರಣೆಯ ಸುಳಿವು, ರಾಜಾರಾಮನು ನೆಲೆ ಸೇರುವವರೆವಿಗೂ ಹೊರಬಾರದಂತೆ ಎಚ್ಚರ ವಹಿಸಿದಳು.

ಹೇಗೋ ವಿಷಯ ತಿಳಿದ ಔರಂಗಜೇಬ ಚೆನ್ನಮ್ಮನ ಬಳಿಗೆ ತನ್ನ ಮಂತ್ರಿಗಳನ್ನು ಕಳುಹಿಸಿದ. ಕೆಳದಿ ಸಂಸ್ಥಾನದವರೂ ತಾನೂ ಸ್ನೇಹಿತರಂತೆ, ತಮಗೆ ಬೇಕಾಗಿರುವುದು ರಾಜಾರಾಮ ಮಾತ್ರ, ಆತನನ್ನು ತನ್ನ ವಶಕ್ಕೆ ಒಪ್ಪಿಸಿದರೆ ಕೆಳದಿಗೆ ಯಾವ ತೊಂದರೆಯೂ ಆಗದೆಂದು ಉಪಾಯವಾಗಿ ಪತ್ರ ಬರೆದ.

ಅದಕ್ಕುತ್ತರವಾಗಿ ಚೆನ್ನಮ್ಮನೂ ಸಹ "ರಾಜಾರಾಮನು ತಮ್ಮ ಸಂಸ್ಥಾನದೊಳಗೇ ಹಾದು ಹೋದುದಾಗಿಯೂ, ಆದರೆ ಆತನಿಗೂ ತನಗೂ ಯಾವುದೇ ಬಗೆಯ ಸಂಪರ್ಕವಾಗಲಿಲ್ಲ, ಅಥವಾ ಆತನ ಬಗೆಗೆ ಯಾವ ವಿಷಯವೂ ತನಗೆ ತಿಳಿಯದು" ಎಂದು ಪ್ರತ್ಯುತ್ತರ ಕಳುಹಿದಳು. ಇದರಿಂದ ಕುಪಿತನಾದ ಬಾದಷಹ ಭಾರೀ ಸೈನ್ಯದೊಂದಿಗೆ ಸ್ವತಃ ತನ್ನ ಮಗ ಅಜಮತಾರನನ್ನೇ ಕೆಳದಿಗೆ ಮುತ್ತಿಗೆ ಹಾಕಲು ಕಳುಹಿಸಿದ.ಚೆನ್ನಮ್ಮನೂ ಹೀಗಾಗಬಹುದೆಂಬ ಅರಿವಿನಿಂದ ಬೃಹತ್ತಾದ ಸೈನ್ಯವನ್ನು ಸಿದ್ಧಗೊಳಿಸಿಕೊಂಡಿದ್ದಳು.

ಆರಂಭದಲ್ಲಿ ಮೊಘಲರ ಸೇನೆ ಅಟ್ಟಹಾಸದಿಂದ ನುಗ್ಗಿ ಬಂದಿತು. ಮೊದಲಲ್ಲಿ ದೊರಕಿದ ಹಲವು ಕೋಟೆಗಳನ್ನು ಗೆದ್ದು ಉತ್ಸಾಹದಿಂದ ಮುಂದೆ ಬಂದ ಅವರಿಗೆ ಕನ್ನಡನಾಡನ್ನು ಪ್ರವೇಶಿಸಿದ ಮೇಲೆ ನಿಜ ಸ್ಥಿತಿಯ ಅರಿವಾಗಲಾರಂಭಿಸಿತು. ಬಯಲು ಸೀಮೆಗಳಲ್ಲಿ ಯುದ್ಧಗಳನ್ನು ಮಾಡಿ ಅನುಭವವಿದ್ದ ಅವರಿಗೆ, ಇಲ್ಲಿನ ಗಿರಿಕಂದರಗಳೇ ದೊಡ್ಡ ಶತ್ರುವಾಗಿ ಪರಿಣಮಿಸಿತ್ತು. ಜೊತೆಗೆ ದಟ್ಟ ಕಾಡು, ಕಾಡುಮೃಗಗಳು, ಕ್ರಿಮಿಕೀಟಗಳು, ಅಲ್ಲಿನ ಕಾಯಿಲೆಗಳು ಅವರನ್ನು ಕಾಡಲಾರಂಭಿಸಿತು.

ಇದರ ಅರಿವಿದ್ದ ಚೆನ್ನಮ್ಮ ಶತೃ ಸೈನವು ಕಣಿವೆಗಳೊಳಗೆ ಬಂದಂತೆಲ್ಲಾ ಅವುಗಳನ್ನು ಮುಚ್ಚಿಸಿ, ಅವರು ತಪ್ಪಿಸಿಕೊಂಡು ಹೋಗುವ ಮಾರ್ಗವೇ ಇಲ್ಲದಂತಾಗಿ ಭಯಭೀತರಾಗುತ್ತಿದ್ದರು, ಸ್ಥಳೀಯರೇ ಆದ ಚೆನ್ನಮ್ಮನ ಸೈನಿಕರು ನಿರ್ದಾಕ್ಷಿಣ್ಯವಾಗಿ ಅವರನ್ನು ಸದೆ ಬಡಿಯುತ್ತಿದ್ದರು. ಜೊತೆಗೆ ಮಲೆನಾಡಿನ ಮಳೆಯ ಆರ್ಭಟ ಬೇರೆ,ಮೊಘಲರ ಸೈನ್ಯ ಅಪಾರ ಸಂಖ್ಯೆಯಲ್ಲೇ ಬಂದರೂ ಈ ಹೊಸ ರೀತಿಯ ಯುದ್ಧವನ್ನೆದುರಿಸಲಾರದೆ ಸೋತು ಸುಣ್ಣವಾದರು. ಅಜಮತಾರನಂತೂ ಕಂಗಾಲಾಗಿ ಹೋದ ಹಿಂದೆ ಹೋದರೆ ತಂದೆಯ ಭಯ, ಮುಂದೆ ನುಗ್ಗಿ ಯುದ್ಧ ಮಾಡಲು ಚೆನ್ನಮ್ಮನ ಭಯ. ಆಗಲೇ ಅವನ ಅನೇಕ ಸೇನಾಧಿಕಾರಿಗಳು ಚೆನ್ನಮ್ಮನಿಂದ ಬಂಧಿತರಾಗಿದ್ದರು.

ಈ ವೇಳೆಗೆ ರಾಜಾರಾಮನು ಜಿಂಜಿಯ ಕೋಟೆಯನ್ನು ಸುರಕ್ಷಿತ್ವಾಗಿ ಸೇರಿಕೊಂಡನು. ಈ ವಿಷಯ ತಿಳಿದ ಔರಂಗಜೇಬನು ಮೊಗಲರ ಸೈನ್ಯಕ್ಕೆ ಯುದ್ಧ ನಿಲ್ಲಿಸಿ ಹಿಂದಿರುಗಿ ಬರುವಂತೆ ತಿಳಿಸಿದನು. ಚೆನ್ನಮ್ಮನ ಜೊತೆ ಮೊಘಲರು ಒಪ್ಪಂದ ಮಾಡಿಕೊಂಡು, ಯುದ್ಧ ನಿಲ್ಲಿಸಿದರು ಬಂಧಿಗಳಾಗಿದ್ದ ಅನೇಕ ಸೈನ್ಯಾಧಿಕಾರಿಗಳನ್ನು ಚೆನ್ನಮ್ಮ ಗೌರವದಿಂದ ಬಿಡುಗಡೆಗೊಳಿಸಿದಳು.ಬದುಕಿದೆ ಎಂದುಕೊಂಡು ಅಜಮತಾರ ದೆಹಲಿಗೆ ಹಿಂದಿರುಗಿದ.

ಜಿಂಜಿಯನ್ನು ತಲುಪಿದ ರಾಜರಾಮ ಪತ್ರವನ್ನು ಬರೆದು, '' ಔರಂಗಜೇಬನಿಗೆ ಹೆದರಿ ದೊಡ್ಡ ದೊಡ್ಡ ಸಾಮ್ರಾಜ್ಯಗಳ ರಾಜರುಗಳು ಸಹಾಯ ನೀಡಲು ಮುಂದೆ ಬಾರದಿರುವಾಗ, ನೀವು ದಿಟ್ಟತನದಿಂದ ನನಗೆ ಸಂಪೂರ್ಣ ಬೆಂಬಲವಿತ್ತು, ಸಹಾಯ ನೀಡಿ ಹಿಂದೂ ಧರ್ಮ ಉಳಿಸಲು ಸಹಾಯ ನೀಡಿದ್ದೀರಿ.

ಮುಂದಿನ ಪುಟ ನೋಡಿ ...

ನಿಮ್ಮ ಧೈರ್ಯ ಮತ್ತು ಸಹಾಯವನ್ನು ಎಂದಿಗೂ ಮರೆಯಲಾರೆ. ಮಾತೆ ಭವಾನಿಯ ಕೃಪೆ ಸದಾ ನಿಮಗಿರಲಿ ಎಂದು ಪ್ರಾರ್ಥಿಸುತ್ತೇನೆ'' ಎಂದು ತನ್ನ ಕೃತಜ್ಞತೆ ಸೂಚಿಸಿದ.

ಚೆನ್ನಮ್ಮನಿಗೂ ಯುದ್ಧ ನಿಂತದ್ದು ನೆಮ್ಮದಿಯಾಗಿ, ರಾಜ್ಯದ ಇತರ ಅಭಿವೃದ್ಧಿ ಕಾರ್ಯಗಳೆಡೆ ಗಮನ ಹರಿಸುವಂತಾಯಿತು. ಬಸಪ್ಪನಾಯಕನಿಗೆ ರಾಜಕಾರಣದಲ್ಲಿ ಸಂಪೂರ್ಣ ಪರಿಣಿತನಾಗುವಂತೆ ಗಮನ ಹರಿಸಿದಳು. ಅರಬರು, ಪೋರ್ಚುಗೀಸರೊಡನೆ ಉತ್ತಮ ವ್ಯಾಪಾರ ಸಂಬಂಧವಿರಿಸಿಕೊಂಡು ರಾಜ್ಯವನ್ನು ಆರ್ಥಿಕವಾಗಿ ಅಭಿವೃದ್ಧಿಗೊಳಿಸಿದಳು. ರಾಜ್ಯದ ರಕ್ಷಣೆಗೆ ಅರಬರಿಂದ ಉತ್ತಮ ತಳಿಯ ಕುದುರೆಗಳನ್ನು ಕೊಂಡಳು.

'' ಕೆಳದಿ ಸಮೃದ್ಧವಾಗಿರಲಿ, ಜನತೆ ಸಂತೋಷವಾಗಿರಲಿ, ಮಾತು ಮುತ್ತಾಗಿರಲಿ, ಪಾಪ ಕಾರ್ಯಗಳಲ್ಲಿ ತೊಡಗದೆ, ಸತ್ಯ, ಕರುಣೆ, ಉತ್ತಮ ಮಾರ್ಗಗಳೇ ನಿನ್ನ ನಡೆಯಾಗಿರಲಿ. ವೃಥಾ ಕಾಲಹರಣ ನಡೆಸದೆ, ಪ್ರಜೆಗಳನ್ನು ಮಕ್ಕಳಂತೆ ಕಾಪಾಡುತ್ತಾ, ಕೆಳದಿ ಮನೆತನಕ್ಕೆ ಉತ್ತಮ ಹೆಸರು ಬರುವಂತೆ ನಡೆದುಕೋ. ಕೆಳದಿ ಸುಖಸಮೃದ್ಧಿಯ ಬೀಡಾಗಲಿ''. ಇದು ಮರಣಶಯ್ಯೆಯಲ್ಲಿದ್ದ ಚೆನ್ನಮ್ಮಾಜಿ ಮಗ ಬಸಪ್ಪನಾಯಕನಿಗೆ ಭೋಧಿಸಿದ ನುಡಿಗಳು.

ಇಪ್ಪತ್ತೈದು ವರ್ಷಗಳ ಕಾಲ ಕನ್ನಡನಾಡಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ರಾಜ್ಯಭಾರ ನಡೆಸಿ, ೧೬೯೬ ರಲ್ಲಿ ವಿಧಿವಶಳಾದಳು ಚೆನ್ನಮ್ಮಾಜಿ. ▪

ಕೆಳದಿಯ ರಾಮೇಶ್ವರ ದೇವಾಲಯ

ಶಿವಪ್ಪನಾಯಕನ ಅರಮನೆ, ಶಿವಮೊಗ್ಗ

ಕಥೆ

ದೀಪದ ಕೆಳಗೆ ...

ಲೇಖಕರು:
ವೈ. ಕೆ. ಸಂಧ್ಯಾ ಶರ್ಮ

ತ್ಯಾಗರಾಜಯ್ಯನವರ ಮನೆಯ ವರಾಂಡದ ಎಲ್ಲಾ ಕುರ್ಚಿಗಳೂ ತುಂಬಿ ತುಳುಕುತ್ತಿದ್ದವು. ನಿಂತುಕೊಂಡಿದ್ದ ಅನೇಕರು ಅಸಹನೆ, ಆತಂಕಗಳಿಂದ ಹೆಜ್ಜೆ ಬದಲಿಸುತ್ತ, ಅತ್ತಿತ್ತ ಹೊಯ್ದಾಡುತ್ತ, ಮಂತ್ರಿಗಳ ಪಿ.ಎ. ತಮ್ಮ ಹೆಸರನ್ನು ಕರೆಯಬಹುದೇ? ಎಂದು ಕಾತರಿಸುತ್ತಿದ್ದರು. ಇನ್ನು ಹಲವರು ತಮ್ಮ ಕಿವಿಗಳನ್ನು ಮೊರದಂತೆ ಅಗಲಿಸಿಕೊಂಡು ಪಿ.ಎ. ಕೃಪಾ ಕಟಾಕ್ಷ ತಮ್ಮತ್ತ ಹರಿದೀತೇ ಎಂದು ತಮ್ಮ ಸರದಿಗಾಗಿ ಚಡಪಡಿಸುತ್ತಿದ್ದರು. ಎಲ್ಲರೂ ನಿರೀಕ್ಷೆಯಲ್ಲಿದ್ದುದರಿಂದ ಒಂದು ರೀತಿಯ ಬಿಗುವಿನ ವಾತಾವರಣ ಹರಡಿತ್ತು.

ತೆರೆದ ದೊಡ್ಡ ವರಾಂಡದಲ್ಲಿ ಸುಮಾರು ನಲವತ್ತೈದಕ್ಕೂ ಹೆಚ್ಚು ಮಂದಿ ಜಮಾಯಿಸಿದ್ದರು. ಬಂಗಲೆಯ ಮುಂಭಾಗದ ಪೋರ್ಟಿಕೋದಲ್ಲಿ ರಾಜಹಂಸನಂತೆ ರಾಜರೀವಿಯಿಂದ ಮೈಚಾಚಿ ನಿಂತಿದ್ದ ಕೆನೆ ಬಿಳುಪಿನ ನೀಳವಾದ ಇನೋವಾ ಕಾರು. ಅದಕ್ಕೆ ಮಾಲೆ ಹಾಕಿದಂತೆ ಮಾಳಿಗೆಯಿಂದ ತೂಗುಬಿದ್ದಿದ್ದ ಮೆಜೆಂತಾ-ಹಳದಿ ಬಣ್ಣದ ಗುಲ್ ಮೊಹರ್ ಗೊಂಚಲುಗಳು. ಪೋರ್ಟಿಕೋದ ಇಕ್ಕೆಲದ ದಾರಿ ವರ್ತುಲಾಕಾರದಲ್ಲಿ ಸುತ್ತಿಕೊಂಡು ಮುಂಭಾಗದ ದೊಡ್ಡ ಗೇಟುಗಳವರೆಗೂ ತಲುಪಿತ್ತು. ಹೊರಗೆ ಗೇಟಿನ ಒಂದು ಪಿಲ್ಲರ್ನ ಹೊರ ಮೈಯಲ್ಲಿದ್ದ ಕಪ್ಪನೆಯ ಗ್ರಾನೈಟ್ ಕಲ್ಲಿನ ಮೇಲೆ `ಧರ್ಮ ರತ್ನಾಕರ ಶ್ರೀ ತ್ಯಾಗರಾಜಯ್ಯ'ನವರ ಹೆಸರನ್ನು ಸುವರ್ಣಾಕ್ಷರಗಳಲ್ಲಿ ಕೆತ್ತಲಾಗಿತ್ತು. ಇನ್ನೊಂದು ಪಿಲ್ಲರ್ನ ಗ್ರಾನೈಟ್ ಮೇಲೆ ಅವರ ಮಾತೃಶ್ರೀಯವರ ಹೆಸರು ಅಲಂಕರಿಸಿತ್ತು.

ಮಣಿಪೋಣಿಸಿದಂತೆ ರಸ್ತೆಯಲ್ಲಿ ಉದ್ದಕ್ಕೆ ನಿಂತಿದ್ದ ಕಾರುಗಳಿಂದ ಜನ ದುಬುದುಬನೆ ಇಳಿಯುತ್ತಿದ್ದರು. ಬಾಗಿಲು ಕಾಯುತ್ತಿದ್ದ ಗೂರ್ಖ-ಆಲ್ಸೇಷನ್ ನಾಯಿಯಿಂದ ಹಿಡಿದು ಗಾರ್ಡನ್ನಲ್ಲಿದ್ದ ಮಾಲಿ,ಆಳು-ಕಾಳು, ಸಿಬ್ಬಂದಿ, ಅಡಿಗೆಯವರು, ಆಫೀಸಿನ ಸ್ಟ್ಯಾಫ್, ಪಿ.ಎ.ವರೆಗೂ ಪ್ರತಿಯೊಬ್ಬರಿಗೂ ಡೊಗ್ಗು ಸಲಾಮು ಹಾಕುತ್ತ, ಮುಖವನ್ನು ನಗುವಿನ ಕೊಡ ಮಾಡಿಕೊಂಡು ಹಲ್ಲುಕಿರಿಯುತ್ತ, ತ್ಯಾಗರಾಜಯ್ಯನವರ ಸಂದರ್ಶನದಿಂದ ಪುಲಕಿತರಾಗಿ, ಧನ್ಯತೆಯಿಂದ ಹಿರಿಹಿರಿ ಹಿಗ್ಗಿ ಅವರ ಮುಂದೆ ಮುಖ್ಯಪ್ರಾಣನಂತೆ ಕೈಮುಗಿದು ವಿಧೇಯತೆಯಿಂದ ನಿಲ್ಲುತ್ತಿದ್ದ ದೃಶ್ಯ ಇಲ್ಲಿ ಪ್ರತಿದಿನದ ಕಾಣಬಹುದಾಗಿದ್ದ ಸಾಮಾನ್ಯ ನೋಟ.

ತ್ಯಾಗರಾಜಯ್ಯನವರು, ಬೆಳಗಿನ ಮೊದಲ ಕಿರಣ ಕಣ್ಣು ಬಿಚ್ಚಿದಾಗಲೇ ಕಣ್ಣುತೆರೆದು ಹಾಸಿಗೆಯಿಂದ ಮೇಲೆದ್ದವರು, ರಾತ್ರಿ ರೆಪ್ಪೆಗೂಡಿಸುವವರೆಗೂ ಉಸಿರಾಡಲೂ ಪುರುಸೊತ್ತಾಗದಂಥ ಪ್ರಚಂಡ ಬಿಜಿ ಮನುಷ್ಯ. ಬಹುಮತದಿಂದ ಆರಿಸಿಬಂದ ಆಡಳಿತ ಪಕ್ಷದ ಬಹು ಪ್ರಭಾವೀ ಕ್ಯಾಬಿನೆಟ್ ದರ್ಜೆಯ ಮಂತ್ರಿಯೆನ್ನುವುದಕ್ಕಿಂತ ಹೆಚ್ಚಾಗಿ ಅವರು ಸಮಾಜಸೇವಾ ಧುರೀಣ, ಜನಾನುರಾಗಿ ನಾಯಕರಾಗಿ ಪ್ರಸಿದ್ಧರು. ಅವರು ಸಾಗಿ ಬಂದ ಹಾದಿ ಜನಸೇವೆ-ಹೋರಾಟಗಳದು. ಬಾಲ್ಯದಿಂದ ನೇತಾರನಾಗುವ ಲಕ್ಷಣ ಅವರಲ್ಲಿತ್ತು. ಸಮಾಜಸೇವೆಯೇ ತಮ್ಮ ಪರಮಗುರಿಯೆಂದು ಅವರು ಭಾಷಣಗಳಲ್ಲಿ ಪದೇ ಪದೇ ಹೇಳುತ್ತಿದ್ದರು. ಶಾಲೆ-ಕಾಲೇಜು ದಿನಗಳಿಂದಲೂ ಬಡಬಗ್ಗರಿಗೆ ಸಹಾಯ, ಆಸ್ಪತ್ರೆ-ದೇವಸ್ಥಾನ,ಧರ್ಮಸಂಸ್ಥೆಗಳಿಗೆ ಅವರು ಕೊಟ್ಟ,ಕೊಡಿಸಿದ ದಾನ,ಹಣ ಸಂಗ್ರಹ, ಮಾಡಿದ ಘನ ಕಾರ್ಯಗಳಿಗೆ ಲೆಕ್ಕವೇ ಇರಲಿಲ್ಲ. ಸದಾ ಜನೋಪಕಾರೀ ಆಲೋಚನೆ-ಚಿಂತನೆಗಳು. ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು, ಬಡ ಹುಡುಗರಿಗಾಗಿ ಊಟ-ವಸತಿನಿಲಯಗಳ ಸ್ಥಾಪನೆ, ನಿರುದ್ಯೋಗಿಗಳಿಗೆ ಉದ್ಯೋಗ ಕೊಡಿಸುವುದು, ಅನಂತರ ವರ್ಗ-ಬಡ್ತಿ, ಸೈಟು, ಮನೆ ಕೊಡಿಸುವುದು, ವಿಧವೆಯರಿಗೆ ಪಿಂಚಣಿ,ವೃದ್ಧರಿಗೆ ವೈದ್ಯಕೀಯ ನೆರವು ಮುಂತಾದ ನಾನಾ ಬಗೆಯ ಸಹಾಯಗಳನ್ನು ಮಾಡಿದ್ದರವರು. ಹೀಗಾಗಿ ಸದಾ ಅವರ ಬೆನ್ನ ಹಿಂದೆ ಜನಗಳ ದಂಡು. ಅವರ ಮುಖ ಕಂಡೊಡನೆ ದೇವರನ್ನೇ ಕಂಡಷ್ಟು ಸಂತೋಷ. ನಾನಾ ಬೇಡಿಕೆಗಳನ್ನು ಅವರ ಮುಂದಿಡುತ್ತಿದ್ದರು ಜನಸಾಮಾನ್ಯರು. ಒಟ್ಟಿನಲ್ಲಿ ಇವರು ಮಾಡಿರುವ ಸಹಾಯಗಳನ್ನೆಲ್ಲ ಪಟ್ಟಿ ಮಾಡುತ್ತ ಹೋದರೆ ಒಂದು ದೊಡ್ಡ ಕಡತವೇ ಆದೀತು. ತಮ್ಮ ಹೆಸರು ಎಲ್ಲೆಡೆ ಪಸರಿಸಿ ಶಾಶ್ವತವಾಗಿ ನಿಲ್ಲಬೇಕೆಂಬುದೇ ಅವರ ತೀವ್ರ ಆಕಾಂಕ್ಷೆ. ಅದರ ಫಲವೇ ಅವರಿಗೆ ದತ್ತವಾದ `ಧರ್ಮರತ್ನಾಕರ' ಎಂಬ ಬಿರುದು. ಎಲ್ಲಕ್ಕಿಂತ ಮಿಗಿಲಾಗಿ ಅವರ `ಬಡವರ ಬಂಧು' ಎಂಬ ವ್ಯಕ್ತಿತ್ವಕ್ಕೆ ಸಾರ್ಥಕತೆ ತಂದುಕೊಡಲು ಸರ್ಕಾರದಲ್ಲಿ ಒಂದು ಉನ್ನತ ಹುದ್ದೆ!

ಆ ದಿನ ಅವರು ತಮ್ಮ ಧರ್ಮಪತ್ನಿ ಶಾರದಮ್ಮನವರೊಡನೆ ಊರ ಹೊರವಲಯದಲ್ಲಿ ನೂತನವಾಗಿ ನಿರ್ಮಿತವಾಗಿದ್ದ ಹೈಟೆಕ್ `ವೃದ್ಧಾಶ್ರಮ'ದ ಉದ್ಘಾಟನಾ ಸಮಾರಂಭಕ್ಕೆ ಹೊರಡುವ ಅವಸರದಲ್ಲಿದ್ದರು. ಅವರನ್ನು ಕಾಣಲು ಬಂದ ಜನಗಳ ಗುಂಪು ಇನ್ನೂ ಕರಗಿರಲಿಲ್ಲ. ಈಗ ಮಂತ್ರಿಗಳಿಗೆ ಪುರುಸೊತ್ತಿಲ್ಲ ಎಂದು ಪಿ.ಎ. ಗದರುತ್ತ ಜನಗಳನ್ನು ಚೆದುರಿಸಲು ಪ್ರಯತ್ನಿಸುತ್ತಿದ್ದಂತೆ ಮಂತ್ರಿಗಳಾಗಲೇ ಕಾರು ಹತ್ತುವ ಸನ್ನಾಹದಲ್ಲಿದ್ದರು. ಆ ಗುಂಪನ್ನು ಸೀಳಿಕೊಂಡು ತಮ್ಮ ಕೃಶವಾದ ಕಂಠದಲ್ಲಿ ನಾಗರಾಜಯ್ಯ ಮೆಲ್ಲನೆ ಧ್ವನಿ ಹೊರಡಿಸಲು ಪ್ರಯತ್ನಿಸುತ್ತ, ಸೋತ ಹೆಜ್ಜೆಗೆ ಕಸುವನ್ನು ತುಂಬುತ್ತ ವೇಗವಾಗಿ ಮುಂದುವರಿಯಲು ಎತ್ತಿದ ಪಾದ ಕುಸಿಯುತ್ತ, ಸಚಿವರನ್ನು ಸಮೀಪಿಸಲು ಅವರು ಮಾಡಿದ ಶತಪ್ರಯತ್ನವೆಲ್ಲ ವ್ಯರ್ಥವಾಯಿತು. ಆತನ ಕ್ಷೀಣಕಂಠವು ಭುರ್ರನೆ ಹೊರಟ ಕಾರಿನ ಸದ್ದಿನಲ್ಲಿ ಕರಗಿಹೋಯಿತು. ಜಂಘಾಬಲ ಉಡುಗಿದಂತಾಗಿ ನಾಗರಾಜಯ್ಯ ನಿಂತಲ್ಲೇ ಕುಸಿದರು.

ಮುಂದಿನ ಪುಟ ನೋಡಿ ...

ನಗರದಿಂದ ಸುಮಾರು 25 ಕಿ.ಮಿ. ದೂರದಲ್ಲಿದ್ದ ಆ ನೂತನವಾದ `ವೃದ್ಧಾಶ್ರಮ'ದ ಭವ್ಯ ಕಟ್ಟಡವನ್ನು ಕಂಡು ತ್ಯಾಗರಾಜಯ್ಯ ನಿಜಕ್ಕೂ ದಂಗಾಗಿಹೋಗಿದ್ದರು. ಸುತ್ತ ಐದು ಎಕರೆಯ ಜಾಗದ ನಡುವಿನಲ್ಲಿ ಸಮೃದ್ಧ ಕೈತೋಟ!...ಸುತ್ತ ಬೇಲಿಯ ಅಂಚಿನಲ್ಲಿ ನೆಟ್ಟ ನೂರಾರು ತೇಗದ ಸಸಿಗಳು. ಅದಕ್ಕೆ ಹೊಂದಿಕೊಂಡಂತೆ ಮಾವು-ಬಾಳೆಯ ತೋಟ. ಹಸಿರುವನದ ಮಧ್ಯದಲ್ಲಿ ತಲೆ ಎತ್ತಿ ನಿಂತಿದ್ದ ಆ ಮಹೋನ್ನತ ಸಂಸ್ಥೆಯ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದವರು ಬೇರಾರೂ ಅಲ್ಲ, ಅವರೇ, ಉದ್ಘಾಟನೆಗೆ ಸಜ್ಜುಗೊಂಡಿದ್ದ ಆ ವೃದ್ಧಾಶ್ರಮ ಅವರ ಒಡೆತನಕ್ಕೇ ಸೇರಿತ್ತು. ಏನಿಲ್ಲವೆಂದರೂ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದ ಅವರ ಜಮೀನು ಕೋಟ್ಯಾಂತರ ರೂಪಾಯಿಗಳ ಆಸ್ತಿ, ಬಂಗಾರದ ಬೆಲೆ. ಹೆಮ್ಮೆಯಿಂದ ಬೀಗಿತು ಅವರೆದೆ. ಮನಸ್ಸು ಧನ್ಯತಾಭಾವದಿಂದ ತುಂಬಿ ತುಳುಕಿತು. ಭವನದ ಮುಖ್ಯದ್ವಾರದ ಕಮಾನಿನ ಮೇಲೆ ಅವರ ನಾಮಧೇಯ ಬಂಗಾರದ ಬಣ್ಣದ ಲೋಹದ ಅಕ್ಷರಗಳಿಂದ ಫಳಫಳಿಸುತ್ತಿತ್ತು. ಇಕ್ಕೆಲದಲ್ಲಿ ಹಸಿರುವಾಣಿಯ ಹೂ ಚಪ್ಪರ.

ಕೊಕ್ಕರೆಯ ಗರಿಯ ಬಿಳುಪಿನ ಜುಬ್ಬದ ಮೇಲಿನ ಉತ್ತರೀಯವನ್ನು ನಾಜೂಕಾಗಿ ಸರಿಪಡಿಸಿಕೊಳ್ಳುತ್ತ, ಚಿನ್ನದ ಕಟ್ಟಿನ ಕನ್ನಡಕದೊಳಗಿನ ಕಣ್ಣುಗಳಿಂದ ಆ ಸೌಧವನ್ನು ತೃಪ್ತಿಯಿಂದ ದಿಟ್ಟಿಸುತ್ತ, ಆನಂದಬಾಷ್ಪ ತುಳುಕಿಸುತ್ತ ಟೇಪ್ ಕತ್ತರಿಸಿದರು. ಆಕಾಶದಿಂದ ಪುಷ್ಪವೃಷ್ಟಿಯಾದಂತೆ ತಟ್ಟನೆ, ಬಹುಮಹಡಿಯತ್ತಣದ ಮೇಲಿನ ತಾರಸಿಯಿಂದ ಅವರ ಮೇಲೆ ಪರಿಮಳಭರಿತ ಹೂರಾಶಿ....ಮಲ್ಲಿಗೆಯ ಹೂಮಳೆಗರೆಯಿತು!!..

ಚಪ್ಪಾಳೆ ಗಡಚಿಕ್ಕಿತು.

ನೆರೆದ ಪ್ರೇಕ್ಷಕರ ಮುಂದೆ ಅವರು ಆನಂದಭಾಷ್ಪಗಳನ್ನುದುರಿಸಿ ಮೈದುಂಬಿ ಭರ್ಜರಿಯಾಗಿ ಭಾಷಣ ಮಾಡಿದರು.

ಅವರ ಮೊಗದಲ್ಲಿ ಸಾರ್ಥಕತೆಯ ಭಾವ ಜಿನುಗಿದಂತೆ ಕಂಠದಲ್ಲಿ ಭಾವುಕತೆ ತುಂಬಿತ್ತು.

`ನನ್ನ ಬಹುದಿನಗಳ ಕನಸು ಇದು...ದೇವರು ಈಗ ಇದನ್ನು ಸಾಕಾರಗೊಳಿಸಲು ಮುಹೂರ್ತ ನಿಗದಿಪಡಿಸಿದ್ದ ಅಂತ ಕಾಣತ್ತೆ... ಜೀವನದಲ್ಲಿ ಎಲ್ಲದಕ್ಕಿಂತ ಅತ್ಯಂತ ಹಿರಿದಾದ ಭಾಗ್ಯವೆಂದರೆ, ನಮ್ಮ ಪಾಲಿನ ಅತ್ಯಮೂಲ್ಯ ವಸ್ತುವೆಂದರೆ ನಮ್ಮ ಹೆತ್ತವರು...ಅವರ ಋಣ ತೀರಿಸಲು ಸಾಧ್ಯವೇ ಇಲ್ಲ...ಹೊಟ್ಟೆ ಬಟ್ಟೆ ಕಟ್ಟಿ, ತಮ್ಮ ಸುಖ-ಸಂತೋಷಗಳನ್ನೆಲ್ಲ ಬದಿಗೊತ್ತಿ, ಮಕ್ಕಳ ಭವಿಷ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಸವೆಯುವ ಅವರ ನಿರ್ವಂಚನೆಯ ತ್ಯಾಗಜೀವನವನ್ನು ನಾವು ಎಷ್ಟು ಹೊಗಳಿದರೂ ಸಾಲದು. ಈಗ ನಮ್ಮ ಸರದಿ, ಅವರ ಕೈಲಾಗದ ಮುಪ್ಪಿನ ಬಾಳಿನಲ್ಲಿ ನಾವು ಮಕ್ಕಳು, ಅವರಿಗೆ ಊರುಗೋಲಾಗಬೇಕು, ಅವರ ಕಡೆಯ ದಿನಗಳನ್ನು ಸುಖ-ಶಾಂತಿಯಿಂದ ಕಳೆಯುವಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ಅವರನ್ನು ನಾವು ಮಕ್ಕಳಂತೆ ಜೋಪಾನವಾಗಿ ನೋಡಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ...ಅವರ ಆಶೀರ್ವಾದ ಬಹಳ ಮುಖ್ಯ' ಮುಂತಾಗಿ ತ್ಯಾಗರಾಜಯ್ಯನವರು ಮಾಡಿದ ಅಮೋಘ ಭಾಷಣವನ್ನು ಕೇಳಿ ಅಲ್ಲಿ ನೆರೆದ ಜನಸ್ತೋಮ ಮತ್ತೊಮ್ಮೆ ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು, ಜಯಕಾರ ಹಾಕಿದರು.

ತ್ಯಾಗರಾಜಯ್ಯನವರ ವಾತ್ಸಲ್ಯಮಯ ವ್ಯಕ್ತಿತ್ವ ಹಾಗೂ ಮಾನವೀಯ ಅಂತಃಕರಣ ಕಂಡು ಜನ ಅವರನ್ನು ಮನಸಾರೆ ಕೊಂಡಾಡಿದರು.

ಪತಿಯ ಗುಣಗಾನ ಕೇಳಿ ಶಾರದಮ್ಮನವರು ಹಿರಿಹಿರಿ ಹಿಗ್ಗಿದರು. ಅವರ ಕೊರಳನ್ನು ಅಲಂಕರಿಸಿದ್ದ ವಜ್ರದ ಹಾರ ಫಳಫಳಿಸಿತು. ಆ ಕಿವಿಯಿಂದ ಈ ಕಿವಿಯವರೆಗೂ ಬಾಯಿ ಹಿಗ್ಗಲಿಸಿ ನಗುತ್ತ `ಇಂಥ ಒಳ್ಳೆಯ ಮನಸ್ಸಿನ ಗಂಡನನ್ನು ಪಡೆಯಲು ನಾನು ಪುಣ್ಯ ಮಾಡಿದ್ದೆ' ಎಂದುಕೊಂಡರು ಮನಸ್ಸಿನಲ್ಲೇ.

`ಇಂಥ ಪುಣ್ಯಾತ್ಮನ್ನ ಹೆತ್ತಮ್ಮ ಸುಖವಾಗಿರಲಿ'-ಎಂದಿತು ಒಂದು ಹಣ್ಣು ಹಣ್ಣು ಮುದುಕಿ.

`ನಮ್ಮಂಥ ಬಡವರಿಗೇ ಇಂಥ ಮಹಲ್ಲು ಕಟ್ಟಿಕೊಟ್ಟೋರು, ಇನ್ನು ಅವರ ಸ್ವಂತ ತಾಯ್ತಂದೆಗಳಿಗೆ ಇನ್ನೆಂಥ ರಾಜವೈಭೋಗದಲ್ಲಿ ಮುಳುಗಿಸಿರಬೋದು!!...ಇಂಥ ಸದ್ಗುಣಗಳ ಯೋಗ್ಯ ಮಗನ್ನ ಪಡೆಯೋಕ್ಕೆ ಅವರೂ ಅದೃಷ್ಟ ಮಾಡಿದ್ರು'- ಎಂದು ಅಲ್ಲಿ ನೆರೆದ ಹಿರಿ ಜೀವಗಳು ಉದ್ಗಾರವೆತ್ತಿದವು.

ಸಮಾರಂಭ ಮುಗಿಯುವಷ್ಟರಲ್ಲಿ ಅವರು ಹೂವಿನ ತೇರಿನೊಳಗೆ ಹುದುಗಿಹೋಗಿದ್ದರು. ನೂರಾರು ಜನ ವೃದ್ಧರು ಸಚಿವ ದಂಪತಿಗಳನ್ನು ಹರಸಿದರು. ವಾಸ್ತವವಾಗಿ ಅಲ್ಲಿದ್ದ ಹಿರಿಯ ನಾಗರಿಕರಿಗಿಂತ ರಾಜಕಾರಣಿಗಳ ದಂಡೇ ದೊಡ್ಡದಿತ್ತು. ಜೊತೆಗೆ ಸಚಿವರನ್ನು ಮುತ್ತಿದ್ದ ಚೇಲಾಗಳ ಹಿಂಡು.

ಮುಂದಿನ ಪುಟ ನೋಡಿ...

ಎಸ್ಟೇಟಿನ ಪ್ರವೇಶ ದ್ವಾರದಿಂದ ಉದ್ದಕ್ಕೆ ನೂರಾರು ಕಾರುಗಳು ಪೋಣಿಸಿದಂತೆ ನಿಂತಿದ್ದವು. ಗರಿಗರಿ ಇಸ್ತ್ರಿ ಮಾಡಿದ ಬಿಳಿಯ ಖಾದೀ ಪೈಜಾಮ-ಜುಬ್ಬಗಳನ್ನು ತೊಟ್ಟವರ ಓಡಾಟ ಪೈಪೋಟಿಯ ಮೇಲೆ ನಡೆದಿತ್ತು. ಒಂದೆಡೆ ಉಟದ ಏರ್ಪಾಡು ಜೋರಾಗಿ ನಡೆದಿತ್ತು. ವಿಶಾಲವಾದ ಲಾನ್ ಮೇಲೆ ನೀಟಾಗಿ ಜೋಡಿಸಿದ್ದ ಟೇಬಲ್ಲು-ಕುರ್ಚಿಗಳು. ಬಿಸಿಲಿನ ಬೇಗೆಗೆ ಛತ್ರಿ ಹಿಡಿದಂತೆ ನೆತ್ತಿಯ ಮೇಲೆ ಸುಭದ್ರ ಷಾಮಿಯಾನವನ್ನು ಹಾಕಲಾಗಿತ್ತು. ಕೇಟರಿಂಗ್ ಜನಗಳು ಹುರುಪಿನಿಂದ ಓಡಾಡುತ್ತಿದ್ದರು. ಯಾರೋ ದೊಡ್ಡ ಕುಳ ಪಕ್ವಾನ್ನಭರಿತ ಭೂರಿ ಭೋಜನದ ವ್ಯವಸ್ಥೆ ಮಾಡಿದ್ದು ಕಂಡುಬರುತ್ತಿತ್ತು. ಜೊತೆಗೆ ಲಾಡು-ಮೈಸೂರು ಪಾಕುಗಳ ಸಿಹಿ ಹಂಚುತ್ತಿದ್ದವರು ಕೆಲವರು.

ಮುಸ್ಸಂಜೆ ಕಳೆದು ಸುತ್ತ ಕತ್ತಲು ಅಂಬೆಗಾಲಿಡುವಷ್ಟರಲ್ಲಿ ಝಗ್ಗನೆ ಸಾಲು ದೀಪಗಳು ಬೆಳಗಿದವು. ಭವನದ ನಖಶಿಕಾಂತ ಇಳಿಬಿಟ್ಟಿದ್ದ ಆಕಾಶ ನೀಲಿ ಬಣ್ಣದ ದೀಪಗಳ ಗೊಂಚಲು ದಿವ್ಯವಾದ ಪ್ರಭೆ ಬೀರುತ್ತ ಮಾಯಾಲೋಕ ಸೃಷ್ಟಿಸಿತ್ತು.

ಮುಂದಿನ ಕಾರ್ಯಕಲಾಪಗಳೆಲ್ಲ ಮುಗಿದು ಮಂತ್ರಿವರ್ಯರು ಮನೆ ತಲುಪುವಾಗ ರಾತ್ರಿ ಹತ್ತುಗಂಟೆ ದಾಟಿತ್ತು. ಅವರು ತುಂಬಾ ಬಳಲಿಹೋಗಿದ್ದರು.

ಮಾಮೂಲಿನಂತೆ ಕಾರಿನ ಶಬ್ದ ಕೇಳುತ್ತಿದ್ದ ಹಾಗೆ ಗೇಟು ತೆರೆದುಕೊಳ್ಳಲಿಲ್ಲ. ಬೇಜವಾಬ್ದಾರಿ ಗೂರ್ಖನ ಬಗ್ಗೆ ರೇಗಿಕೊಳ್ಳುತ್ತ ಡ್ರೈವರ್ ಕೆಳಗಿಳಿಯುವಷ್ಟರಲ್ಲಿ ಗೇಟಿನತ್ತಲೇ ಕಣ್ಣು ಹೂತು ಅಲ್ಲೇ ಪಕ್ಕದ ಕಟ್ಟೆಯ ಮೇಲೆ ಕುಸಿದು ಕೂತಿದ್ದ ನಾಗರಾಜಯ್ಯನವರು , ಕಾರಿನ ಹಾರನ್ನಿನ ಸದ್ದಿಗೆ ಬೆಚ್ಚಿಬಿದ್ದು ಧಡಬಡಿಸುತ್ತೆದ್ದು ನಡುಗುವ ಕೈಗಳಿಂದ ಮೆಲ್ಲನೆ ಗೇಟನ್ನು ತೆರೆದರು.

ಕಾರು ಭುರ್ರನೆ ಅವರ ಮೊಗಕ್ಕೆ ಬಿಸಿಗಾಳಿಯನ್ನು ಎರಚುತ್ತ ಪೋರ್ಟಿಕೋದತ್ತ ಸಾಗಿತು.

ಆತಂಕ-ಗಾಬರಿಗಳ ಮುಖಭಾವದಿಂದ ಅದನ್ನೇ ಹಿಂಬಾಲಿಸುತ್ತ ಕಾಲೆಳೆದುಕೊಂಡು ನಡೆದುಬಂದ ಆತನ ಬಾಗಿದ ಬೆನ್ನು, ಸುಕ್ಕುಗಟ್ಟಿದ ಮುಖ,ಗುಳಿಬಿದ್ದ ಕಣ್ಣುಗಳಲ್ಲಿ ಅನಾಥವಾಗಿ ತತ್ತರಿಸುತ್ತಿದ್ದ ಸಣ್ಣ ಪಾಪೆಗಳು ದೈನ್ಯದ ಶಿಲ್ಪವಾಗಿದ್ದವು.

ಕಾರಿನಿಂದ ಕೆಳಗಿಳಿದ ತ್ಯಾಗರಾಜಯ್ಯನವರು ಅವರತ್ತ ಕಣ್ಣೂ ಹಾಯಿಸದೆ ತಮ್ಮ ಪಾಡಿಗೆ ತಾವು ಮುನ್ನಡೆದರು.

ಪಸೆಯಾರಿದ ತಮ್ಮ ಗಂಟಲಿನೊಳಗೆ ಎಂಜಲನ್ನು ನುಂಗಿಕೊಳ್ಳುತ್ತ ನಾಗರಾಜಯ್ಯ ಅವರ ಬಳಿಸಾರಿ ಕುಗ್ಗಿದ ದನಿಯಲ್ಲಿ-

`ನಿಮ್ಮ ತಾಯಿಗೆ ಇದ್ದಕ್ಕಿದ್ದ ಹಾಗೆ ತುಂಬ ಸೀರಿಯಸ್ ಆಗಿದೆಯಪ್ಪ....'

-ಬಹುಪ್ರಯಾಸದಿಂದ ಒಂದೊಂದೇ ಅಕ್ಷರವನ್ನು ಉಚ್ಚರಿಸುವುದರಲ್ಲಿ ಆತನಿಗೆ ಉಬ್ಬಸ ಹೆಚ್ಚಾಯಿತು.

ಮಂತ್ರಿಗಳ ಮುಖ ಗಂಟಿಕ್ಕಿತು. ಅವರಿಗೆ ಹಾಸಿಗೆ ಕಂಡೇನೇ ಎಂಬಷ್ಟು ಸುಸ್ತೋ ಸುಸ್ತು. ಮತ್ತೇನು ನಿಮ್ಮ ಗೋಳು ಎಂಬಂತೆ ಮುಖವನ್ನು ಹಿಂಡಿದರು.

ಮತ್ತೆ ನಾಗರಾಜಯ್ಯನೇ-
`ಡಾಕ್ಟರ್ರು ಬಂದು ಹೋದರು...ಇನ್ನೂ ಅವಳಿಗೆ ಜ್ಞಾನ ಬಂದಿಲ್ಲ....ನರ್ಸಿಂಗ್ ಹೋಂಗಾದ್ರೂ....'
- ಇಷ್ಟು ಮಾತನಾಡುವಷ್ಟು ಹೊತ್ತಿಗೆ ಆತನ ಕಂಠ ಬಿಗಿದುಬಂತು...ಮುಖದಲ್ಲಿ ಕಿಕ್ಕಿರಿದ ಗಾಬರಿ!

ಮಂತ್ರಿಗಳು ಗಲಿಬಿಲಿಗೊಂಡರು ಒಂದು ಕ್ಷಣ...ಆದರವರ ಕಣ್ರೆಪ್ಪೆಗಳು ಆಯಾಸದಿಂದ ಮೆತ್ತಿಕೊಳ್ಳುತ್ತಿದ್ದವು. ದೇಹ ದಣಿದುಹೋಗಿತ್ತು. ಕಿವಿ ಕಿವುಡಾದಂತೆ ಅವರು ಧಡಧಡನೆ ಮಹಡಿಯೇರುತ್ತ-

`ಸರಿ ಸರಿ...ನಂಗೀಗ ತುಂಬ ಆಯಾಸವಾಗಿದೆ...ನಾಳೆ ನೋಡಿದರಾಯ್ತು....'-ಎನ್ನುತ್ತ ತ್ಯಾಗರಾಜಯ್ಯ , ತಂದೆಯತ್ತ ತಿರುಗಿ ಸಹ ನೋಡದೆ ನುಡಿದು ತಮ್ಮ ಮಲಗುವ ಕೋಣೆಯನ್ನು ಹೊಕ್ಕರು. ಬಾಗಿಲು ಟಪ್ಪೆಂದು ಜೋರಾಗಿ ಹಾಕಿಕೊಂಡಿತು.

ಕಮಕ್ ಕಿಮಕ್ಕೆನ್ನದೆ ತುಟಿಗಳಿಗೆ ಕೀಲಿಹಾಕಿಕೊಂಡು ಮಗನನ್ನು ಬಿಮ್ಮನೆ ಹಿಂಬಾಲಿಸಿ ನಡೆದ ಸರ್ವಾಲಂಕಾರಭೂಷಿತೆಯಾದ ತಮ್ಮ ಸೊಸೆ ಶಾರದದೇವಿಯನ್ನೇ, ಎವೆಯಿಕ್ಕದೆ ದೈನ್ಯದಿಂದ ದಿಟ್ಟಿಸುತ್ತ ಅಸಹಾಯಕರಾಗಿ ನಿಂತ ನಾಗರಾಜಯ್ಯನವರು ನಿಂತಲ್ಲೇ ಕಂಭವಾಗಿದ್ದರು.▪

ಕನ್ನಡದ ಒಂದು ಕಾಯಕಕ್ಕೆ ಕೈ ಜೋಡಿಸಿ

ನೊಂದಾಯಿಸಲು ಮಿಂಚಂಚೆ ವಿಳಾಸ -sugamakannada@gmail.com

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ, ಕಗ್ಗ, ಗಮಕ, ಹರಿದಾಸ ಸಾಹಿತ್ಯಗಳು ಕೆಲವು ಪ್ರಮುಖ ಪ್ರಾಕಾರಗಳು. ಇವುಗಳಲ್ಲಿ ಭಗವಂತನ ನಾಮಸ್ಮರಣೆಯಷ್ಟೇ ಅಲ್ಲದೆ, ವಚನಗಳು ತಮ್ಮ ಸರಳ ನುಡಿಯಲ್ಲಿ ಅನುಭವದ ಅರಿವು ನೀಡುವಲ್ಲಿ ನೆರವಾದರೆ, ಹರಿದಾಸ ಸಾಹಿತ್ಯವು ಸಂಗೀತ ಮತ್ತು ಸೊಬಗಿನ ಸಾಹಿತ್ಯದ ಮಿಲನವಾಗಿದೆ. ಕಗ್ಗ, ತ್ರಿಪದಿ,ಷಟ್ಪದಿಗಳು ಅರ್ಥಪೂರ್ಣ ವಿಚಾರಗಳಿಂದ ಕೂಡಿ ಜೀವನದರ್ಶನ ಹಾಗೂ ವಿಚಾರಪೂರ್ಣ ವಿಷಯಗಳಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನ ಎಂದಿಗೂ ಝಗಝಗಿಸುವ ಕೊಡುಗೆಗಳಾಗಿವೆ.

ಅಂತರ್ಜಾಲದ ಈ ಮಹಾ ಜಗತ್ತಿನಲ್ಲಿ ಈಗ ಸಾಕಷ್ಟು ಕನ್ನಡಿಗರು ಕರ್ನಾಟಕದಿಂದ ಹೊರಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅವರೆಲ್ಲರಿಗೂ ಅಲ್ಲದಿದ್ದರೂ ಆಸಕ್ತರಿಗೆ ನೆನೆದಾಗ ಬೆರಳಂಚಿನಲ್ಲೇ ಒಂದೇ ಕಡೆ ಕೈಗೆಟಕುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸುಗಮ ಕನ್ನಡ.ಕಾಂ ಅಂತರ್ಜಾಲ ಕ್ಷೇತ್ರದಲ್ಲಿ ಸುಪ್ರಸಿದ್ಧ ಶರಣರ ವಚನಗಳು, ದಾಸರ ಪದಗಳು, ಕಗ್ಗ, ತ್ರಿಪದಿಗಳು ಹೀಗೆ ಇನ್ನೂ ಅನೇಕ ರಚನೆಗಳನ್ನು ಸಂಗ್ರಹ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ತಮ್ಮಗಳ ಸಹಾಯ ಬೇಕಾಗಿದೆ. ತಮಗೆ ಕನ್ನಡ ಬೆರಳಚ್ಚು ಮಾಡಲು ಸಾಧ್ಯವಿದ್ದಲ್ಲಿ, ಈ ಕಲಸ ಆದಂತೇ ಎಂದುಕೊಳ್ಳಿ. ಪ್ರತಿ ವಿಭಾಗದಲ್ಲೂ ಸಾವಿರಕ್ಕೂ ಮೀರುವಂತೆ ಕೃತಿಗಳ ಕಲೆ ಹಾಕುವ ಯೋಚನೆ ಇದೆ. ಈ ಕೆಲಸಕ್ಕೆ ಗರಿಷ್ಟ ಮಿತಿಯಿಲ್ಲದಂತೆ ಹೆಗಲುಕೊಟ್ಟು ನೀವು ಸಹಾಯ ನೀಡಬಹುದು.ನಿಮ್ಮಲ್ಲಿ ಹೆಚ್ಚಿನ ಕನ್ನಡ ಅಭಿಮಾನವಿದ್ದಷ್ಟೂ ಹೆಚ್ಚಿನ ಸಹಾಯ ಸಾಧ್ಯವೆಂಬ ನಂಬಿಕೆ ನಮ್ಮದು. ೩೧ ಆಗಸ್ಟ್ ೨೦೧೫ ರೊಳಗೆ ಈ ಕಾಯಕ ಮುಗಿಸಿ, ಆಸಕ್ತರಿಗೆ ಲಭ್ಯವಾಗಿಸುವ ಆಸೆ ನಮ್ಮದು.

ಸಿಡ್ನಿ ಕನ್ನಡ ಶಾಲೆಯಿಂದ ಈಗಾಗಲೇ ಉತ್ತೀರ್ಣರಾದ ಮಕ್ಕಳೂ, ಸಿಡ್ನಿ ಕನ್ನಡ ಶಾಲೆಯ ಶಿಕ್ಷಕರೂ, ಆಸ್ಟ್ರೇಲಿಯಾದಲ್ಲಿ ಈಗಾಗಲೇ ಕನ್ನಡ ಟೈಪಿಂಗ್ ಮಾಡಲು ಕಲಿತವರೂ,ಪ್ರಪಂಚದ ನಾನಾ ಕಡೆಯಿಂದ ಹೊರನಾಡ ಚೆಲುಮೆಯ ಓದುಗರೂ, ಬರಹಗಾರರೂ ಸಹ ತಮ್ಮ ಕೈ ಜೋಡಿಸಿದ್ದಾರೆ.

ಸಹಾಯ ಹೇಗೆ?

೧.ಮೊದಲು ಆಸಕ್ತರು ಈ-ಮೈಲ್ ಮೂಲಕ ತಮ್ಮ ಹೆಸರು ನೊಂದಾಯಿಸಿಕೊಳ್ಳುವುದು.

೨.ಸುಪ್ರಸಿದ್ಧ ರಚನಕಾರರ ವಚನ, ದಾಸರ ಪದಗಳು, ಕಗ್ಗ, ತ್ರಿಪದಿಗಳು ಇವುಗಳಲ್ಲಿ ಸುಮಾರು ನಾಲ್ಕೈದು ಪುಟಗಳಷ್ಟು ತಮಗೆ ಈ-ಮೈಲ್ ಮೂಲಕ ಕಳುಹಿಸಿಕೊದಲಾಗುವುದು.

೩.ಅದನ್ನು ತಾವು ಬರಹ-ಯೂನಿಕೋಡ್ ಅಥವಾ ಗೂಗಲ್ ಸಹಾಯದಿಂದ ಟೈಪ್ ಮಾಡಿ ನಮಗೆ ಕಳುಹಿಸುವುದು.

೪.ಅವುಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ ನಂತರ ಸಹಾಯ ಮಾಡಿದ ಎಲ್ಲರ ಹೆಸರುನ್ನೂ ಶಾಶ್ವತವಾಗಿ ಮುದ್ರಿಸಲಾಗುವುದು. ಅತಿ ಹೆಚ್ಚು ನೆರವು ನೀಡಿದವರಿಗೆ ಕನ್ನಡ ಶಾಲೆಯ ಕಡೆಯಿಂದ ಉಡುಗೊರೆ ಖಚಿತ.

ನೊಂದಾಯಿಸಲು ಮಿಂಚಂಚೆ ವಿಳಾಸ - sugamakannada@gmail.com

ಬ್ಯಾಗಾಯಣ

ಸ್ಮಿತಾ ಮೇಲ್ಕೋಟೆ

ಪುರಾಣ ಪುಣ್ಯ ಕಥೆಗಳಲ್ಲಿ ಬಾದರಾಯಣ ಸೂತ್ರ ಅಂತ ಕೇಳಪಟ್ಟಿರಬಹುದು. ಇದೇನು ಬ್ಯಾಗಾಯಣ ಅಂತ ಯೋಚಿಸುತ್ತಾ ಕೂರೋಕ್ಕೆ ಸಮಯವಿಲ್ಲ ಸ್ವಾಮಿ. ಬೇಗ ಜಾಗ ಬಿಡಿ ನಮ್ಮ ಬ್ಯಾಗ್ ಇಟ್ಟು ಸೀಟ್ ರಿಸರ್ವ್ ಮಾಡಿಸಿದ್ದೇನೆ. ನಿಮಗಿಂತ ಮುಂಚೆ ಬ್ಯಾಗ್ ಕಿಟಕಿಯೊಳಗಿಂದ ತೂರಿ, ಜನ ಜಂಗುಳಿಯಲ್ಲಿ, ಮೈ ಕೈ ನೋವು ಮಾಡಿಕೊಂಡು ಬಸ್ ಹತ್ತಿ ಒಳ ಬಂದಿದ್ದೆನಪ್ಪೋ.. ಎಂಥ ಕಿರಿ ಕಿರಿ ಮಾಡ್ತಿಯೋ.. ಹಿಂಗ್ ಮನಸ್ಸು ಯೋಚನೆ ಮಾಡ್ತಾ ನಿಂತಿರಬೇಕಾದರೆ,.. ಏರ್ಪೋರ್ಟ್ ಕೌಂಟರ್ನಲ್ಲಿ ಕುಳಿತಿದ್ದಾಕೆ ಲಲನಾಮಣಿ ಮೆಲ್ಲನೆ, "ನಿಮ್ಮ ಬ್ಯಾಗೇಜು ಇಲ್ಲಿಡಿ" ವೆಯಿಟ್ ನೋಡಬೇಕು ಅಂದಾಗಲೇ ಎಚ್ಚರ !!!

ಬ್ಯಾಗು ಎಷ್ಟು ತೂಕ, ಅದರ ಸುತ್ತಳತೆ, ಅಗಲ, ಎತ್ತರದ ಬಗ್ಗೆ ತಲೆ ಕೆಡೆಸಿಕೊಂಡು, ನೂರೆಂಟು ಬಾರಿ ತೂಕ ಹಾಕಿ, ಸಾವಿರ ಸಲ ಎತ್ತಿ ನೋಡಿ, ಮೊದಲ ಸಲ ಪರ ದೇಶಕ್ಕೆ ಹೋಗುತ್ತಿರುವ ನಾನು, ಬ್ಯಾಗ್ ಬಗ್ಗೆ ಬಹಳವೇ ಯೋಚನೆ ಮಾಡಹತ್ತಿದ್ದೆ. ಏನಪ್ಪಾ ಮಾಡೋದು ಸ್ವಲ್ಪ ಜಾಸ್ತಿ ಆದರೂ, ಏರ್ಲೈನ್ ನವರು ನನ್ನ ಬ್ಯಾಗ್ ಬಿಡಲ್ಲ ಒಳಗೆ, ಇಲ್ಲಾಂದ್ರೆ ಸಾವಿರಾರು ರುಪಾಯಿ ಕೊಟ್ಟು, ಎಕ್ಸ್ಟ್ರಾ ಪಕ್ಸ್ಟ್ರಾ ದುಡ್ಡು ಕೊಟ್ಟು ಹೊತ್ತು ಹೋಗಬೇಕು.

ಹಿಂಗೇ ಬ್ಯಾಗಾಯಣ ಮಂತ್ರ ಜಪಿಸಿಕೊಂಡು ನಿಂತಿದ್ನಾ.. ಪಕ್ಕದಲ್ಲಿ ಇನ್ನೊಬ್ಬಳು ಹುಡುಗಿ ಭಾರಿ ಲಗೇಜ್ ಹಿಡಿದು ನಿಂತಿದ್ದು ಕಣ್ಣಿಗೆ ಬಿದ್ದು, ನಾನು ಬಹಳ ಕಳಕಳಿಯಿಂದ, ಹುಡುಗಿ, ನಿನ್ನ ವೆಯಿಟ್ ಎಷ್ಟು ಅಂತ ಕೇಳಿದ್ದಕ್ಕೆ, ನಿಮಗ್ಯಾಕ್ರೀ ಚಿಂತೆ, ನನ್ನ ವೆಯಿಟ್ ನಾನು ಹೊತ್ತುಕೊಂಡು ನಿಂಥಿದ್ದೀನಿ, ನಿಮಗೂ ಅದಕ್ಕೂ ಸಂಬಂಧ ಇಲ್ಲ ಅಂತ ಮುಖಕ್ಕೆ ರಪ್ ಅಂತ ರಫ್ ಆಗಿ ಹೇಳಿ, ಕೋಪದಿಂದ ಕೆಂಪಗಾದಳು. ಬ್ಯಾಗಾಯಣ ನನ್ನ ಪುಣ್ಯಕ್ಕೆ ಬೋರಾಯಣ ಆಗಬಾರದು ನಿಮಗೆ..

ಇನ್ನೊಂದು ಸಂಸಾರ, ಮಕ್ಕಳು ಮರಿಗಿಂತ ಜಾಸ್ತಿ, ಪುಟ್ಟ ಪುಟ್ಟ ಬ್ಯಾಗ್ ಹಿಡಿದು ನಿಂತಿದ್ದವು. ಕೈಯಲ್ಲೊಂದು, ಬೆನ್ನಲ್ಲೊಂದು, ತಲೆಯಲ್ಲೊಂದು ಚಿಕ್ಕ ಕೊಂಡಿಗೆ ರಾಜಾ ರೋಷವಾಗಿ ಬ್ಯಾಗ್ ಗಳು ತೂಗಾಡಿಕೊಂಡಿದ್ದವು. ಅದೇನು ಸಾಮಾನು ಹೊತ್ತು ತಂದಿದ್ದಾರೋ ನಾಕಾಣೆ. ಗಂಡ ಮತ್ತು ಹೆಂಡತಿ ಮಧ್ಯೆ ಅದೇನೋ ಸ್ವಲ್ಪ ಬಿಸಿ ಬಿಸಿ ಚರ್ಚೆ ನಡೆಯುತ್ತಿದ್ದವು. ನನಗನಿಸಿದ ಪ್ರಕಾರ, ಗಂಡ ಬೇಡ ಅಂದರೂ ಹೆಂಡತಿ ಹೊತ್ತು ತಂದ ಸಾಮಾನು ಬಗ್ಗೆಯೇ ಇರಬೇಕು. ಹೆಂಡತಿ ಜೋರಾಗಿ unaccompanied ಕಳಿಸಣ ಬಿಡಿ ಅಂತ ಜೋರಾಗಿ ಹೇಳುತಿತ್ತು.

ನಂಗೂ ಮೊದಲ ಸಲ, ಸಧ್ಯ ನನ್ನ ಜೊತೆ ನನ್ನ ಸಾಮಾನು ಬಿಟ್ಟರೆ ಸಾಕು ಅಂತ ಚಿಂತೆ. ಕೌಂಟರ್ ಲಲನಾ ಮಣಿ, ನನ್ನ ಪಾಸ್ಪೋರ್ಟ್ ಚೆಕ್ ಮಾಡಿ, ಬ್ಯಾಗ್ ತೂಕ ಹಾಕಿ, ನಮ್ಮ ಪ್ಯಾಂಟ್ ಹೊಲೆಯುವ ಟೈಲರ್ ಹಾಗೆ ನನ್ನ ಸೂಟ್ಕೇಸ್ ಪೂರ್ತಿ ಟೇಪ್ ಅಂಟಿಸಿ, ತನ್ನ ಹಿಂದೆ ಅದನ್ನ ಕಳಿಸಿಬಿಟ್ಟಳು. ನನಗೋ ಬ್ಯಾಗ್ ಕಾಣೆಯಾದ ಹಾಗೆ ಮನಸ್ಸಿನಲ್ಲಿ ವಿರಹ ವೇದನೆ. ಬೇನ್ನಿಗಂಟಿದ್ದ ಚಿಕ್ಕ ಬ್ಯಾಗೊಂದು ಹಿಡಿದು, "ನಾನೊಂದು ಪ್ಲೇನು ನೀನೊಂದು ಪ್ಲೇನು ಮನಸು ಮನಸು ದೂರ ತೂಕ ಮಾತ್ರ ಭಾರ ಭಾರ" ಅಂತ ಗೊತ್ತಿದ್ದ ಹಳೆಗನ್ನಡ ಹಾಡಿನ ರಾಗ ಹಾಕಿ ಹಾಡಿ, ಮನಸ್ಸು ಸ್ವಲ್ಪ ತಹಬದಿಗೆ ತರುವ ಪ್ರಯತ್ನ ಮಾಡಿದೆ.

ವಿಮಾನ ಆಕಾಶದಲ್ಲಿ ಹಕ್ಕಿಯಂತೆ ಹಾರಾಡಿ. ನನ್ನ ಹೊಟ್ಟೆಯಲ್ಲಿ ಚಿತ್ರಾನ್ನ ಮಾಡಿ, ಅದು ಗಂಟಲು ಬಾಯಿಗೇ ಬರುವ ಹಾಗೆ ಆಗಿ, ತಲೆ ಸುತ್ತು ಬಂದು ಕಣ್ಣು ಮುಚ್ಚೆ ಮತ್ತೆ ನನ್ನ ಬ್ಯಾಗ್ ಧ್ಯಾನದಲ್ಲಿ ನಿರತನಾಗಿಬಿಟ್ಟೆ. ಅಮೇರಿಕ ಊರಿಗೆ ಹೋದರೆ, ಅಲ್ಲಿ ಚೆನ್ನಾಗಿ ಕಾಣಿಸಬೇಕೆಂದು ಬಹಳಷ್ಟು ಹೊಸಬಟ್ಟೆ ಕೊಂಡಿದ್ದೆ. ಅಲ್ಲಿ ಹೋಟೆಲ್ ನಲ್ಲಿ ಏನು ಊಟ ತಿಂಡಿ ಸಿಗುತ್ತೋ ಎಂದು ನನ್ನ ಅಮ್ಮನ ನಳಪಾಕ ಕೂಡ ಪಾಕೆಟ್ನಲ್ಲಿ ಪ್ಯಾಕ್ ಆಗಿತ್ತು. ಸಾಕಷ್ಟು ಸಮಯ ವಿಮಾನದ ಒಳಗೆ ಕಳೆದು, ಅಲ್ಲಿ ಸಪ್ಲೈ ಮಾಡಿದ ಸಪ್ಪೆ ಊಟ ತಿಂದು ಸಾಕಾಗಿ, ಯಾವಾಗ ಇಳಿಯುತ್ತೇನೋ, ಯಾವಾಗ ಅಮ್ಮ ಕಟ್ಟಿ ಕೊಟ್ಟ ಖಾರದ ಚಕ್ಲಿ ಅಗಿಯುತ್ತೇನೋ ಅಂತ ಕನಸು ಕಾಣುತ್ತಾ ಇರಬೇಕಾದರೆ, ವಿಮಾನ ಭೂಮಿಗಿಳಿಯುವ ಸೂಚನೆ ಕೊಟ್ಟರು. ಸಧ್ಯ ಎಲ್ಲಾ ಸುಖಾಂತವಾದರೆ ಸರಿ ದೇವರೇ, ನನ್ನ ಬ್ಯಾಗ್ ನನ್ನ ಮತ್ತೆ ಸೇರಿದರೆ ಸಾಕಪ್ಪ. ನಿನಗೆ ಭಾರತಕ್ಕೆ ಬಂದ ತಕ್ಷಣವೇ ಅಭಿಷೇಕ ಮಾಡಿಸ್ತೀನಿ, ಕಾಪಾಡಪ್ಪ ಅಂತ ಬೇಡಿಕೊಂಡು ವಿಮಾನದಿಂದ ಇಳಿದೆ.

ಗಗನ ಸಖಿ ತೋರಿಸಿದ ಕಡೆ ನಡೆಯುತ್ತಾ "ಎಲ್ಲಿರುವೆ ನನ್ನ ಮನವ ಕಾಡುವ ಬ್ಯಾಗೇ, ಬೇಗ ನನ್ನ ಬಳಿಗೆ ಸಾಗೆ ..." ಅಂತ ಗುನುಗುತ್ತಾ, ಕನ್ವೇಯರ್ ಬೆಲ್ಟಿನ ಬಳಿ ಬಂದು ನಿಂತೆ, ಕಾದೆ, ಕಾದೆ, ಕಾದೆ ಕಾದೇ ಕಾದೆ!!!!

ಗಂಟಾನುಗಂಟೆಯಾದರೂ ಕೂಡ ನನ್ನ ಬ್ಯಾಗು ಕಣ್ಣಿಗೆ ಬೀಳಲಿಲ್ಲ, ಅಯ್ಯೋ ನನ್ನ ಬಿಟ್ಟು ಬೇರೆ ವಿಮಾನ ಏರಿ ಹೋಗಿಬಿಟ್ಟೆಯಾ ಎಂದು ಪರಿತಪಿಸುತ್ತಾ, ಅಮೇರಿಕಾದ ವಿಮಾನ ನಿಲ್ದಾಣ ಅಧಿಕಾರಿಗಳ ಬಳಿ ನಡೆದೆ, ನನ್ನ ಕರುಣಾಜನಕ ಸ್ಥಿತಿಯನ್ನು ವಿವರಿಸಿದೆ. ಅವರು ಇದೆಲ್ಲಾ ಮಾಮೂಲು, ಬೇರೆ ವಿಮಾನ ಹಿಡಿದು ಹೋಗಿರಬೇಕು. ನೀವು ಏನೂ ಯೋಚನೆ ಮಾಡಬೇಡಿ, ನಿಮ್ಮ ಅಡ್ರೆಸ್ ಕೊಡಿ ಎಂದು ಚಿಕ್ಕ ಕಿಟ್ ಕೈಗೆ ಹಾಕಿ ಬಿಟ್ಟರು. ನನ್ನ ದುಃಖ ತಡೆಯಲಾಗಲಿಲ್ಲ. ಛೆ! ಎಂಥಾ ಕೆಲಸವಾಯಿತು, ನನ್ನ ಪ್ರೀತಿಯ ಬ್ಯಾಗ್ ಕಳೆದು ಹೋಯಿತೆ... " ಎಲ್ಲಿ ಮರೆಯಾದೆ ನನ್ನ ಪ್ರೀತಿಯ ಬ್ಯಾಗೇ, ಹೇಗೆ ದೂರಾದೆ ಎಂದು ಶ್ರೀರಾಮ ಸೀತೆಯನ್ನು ಹುಡುಕುವ ಹಾಗೆ ಎಲ್ಲಾ ಕಡೆ ಹುಡುಕಿ ನೋಡಿದೆ.. ಏನೂ ಪ್ರಯೋಜನವಾಗಲಿಲ್ಲ..

ಟ್ಯಾಕ್ಸಿ ಹಿಡಿದು ಹೋಟೆಲ್ ಒಳಗೆ ಬಂದು ಏರ್ಪೋರ್ಟ್ ನವರು ಕೊಟ್ಟ ಚಿಕ್ಕ ಬ್ಯಾಗ್ ತೆಗೆದು ನೋಡ್ತೀನಿ, ೩-೫ ದಿನಕ್ಕೆ ಬೇಕಾದ ಬಟ್ಟೆಗಳು, ಬ್ರಷ್ ಪೇಸ್ಟ್ ಪ್ಯಾಕ್ ಮಾಡಿ ೨೦೦ ಡಾಲರ್ ವೌಚೆರ್ ಬೇರೆ ಇಟ್ಟಿದ್ದಾರೆ. ಸರಿ ನನ್ನ ಆಫೀಸ್ ಟ್ರಿಪ್ಪೆ ಏನು ಬೇಕೋ ಕೊಂಡು, ಹೇಗೋ ಸಂಭಾಳಿಸಿದೆ. ವಾರದ ಬಳಿಕ ಮತ್ತೆ ಭಾರತಕ್ಕೆ ಮರಳಿ ಹೋಗುವಾಗ, ಅಮೇರಿಕಾದ ಚಿಕ್ಕ ಬ್ಯಾಗ್ ಮಾತ್ರ ಹಿಡಿದು ವಾಪಸ್ ಮನೆ ಬಾಗಿಲು ತಟ್ಟಿ, ಅಮ್ಮ ಬಾಗಿಲು ತೆರೆದ ತಕ್ಷಣ, ದುಃಖತಪ್ತ ಕಣ್ಣುಗಳಿಂದ "ಅಮ್ಮಾ ಬ್ಯಾಗ್ ಏನಾಯಿತು ಗೊತ್ತೇನಮ್ಮ ..." ಅಂದಾಗ...

ಅಮ್ಮಾ "ಅಯ್ಯೋ ರಾಮ, ನಿನ್ನ ಬ್ಯಾಗಾ.. ನೀನು ಅಮೇರಿಕ ಹೊರಟು, ಎರಡು ದಿನಕ್ಕೆ ನಿಯತ್ತಿನ ನಾಯಿ ಹಾಗೆ ನಮ್ಮ ಮನೆ ಬಾಗಿಲಿಗೆ ಡೆಲಿವರಿ ಬಂದಿತ್ತು" ಅಂದಳು..

ನೋಡ್ತೀನಿ... ಬ್ಯಾಗ್ ಪ್ಯಾಕ್ ಮಾಡೋ ಅವಾಂತರದಲ್ಲಿ.... ಅಡ್ರೆಸ್ ಭಾರತದ್ದೇ ಬರೆದು ಬಿಟ್ಟಿದ್ದೆ !!! ▪

Pictures
G Kumarswamy
Presents
TWO NATIONAL AWARDS
BEST ACTOR
BEST MAKE-UP
OFFICIAL SELECTION
Naanu
Avanalla
...Avalu
I am Not He
...She
Language - Kannada | Duration - 109min
ನಾನು
ಅವನಲ್ಲ
...ಅವಳು
EVENT
CINEMAS
Aug 30
LIVERPOOL Sunday 3pm
Producer
Ravi R Garani
Screenplay - Direction
B S Lingadevaru
Cinematography: Ashok V Raman Music Director: Raaganidhi Anoop Seelin Editor:Nagendra K Ujjani
Dialogue: Jogi, Coffee Raghavendra Lyrics: Padakanaja Arasu Antare Art Director: Hosmane Murthy, Nagaraj Hosuru
Make up: Nagaraj, Raju Original Story: Living Smile Vidya (Transwoman)
Sanchari Vijay | Sumitra (Transwoman) | Kunal Punekar | Sundar | Maniyamma (Transwoman)
Bhoopal H M | Shailashri S T | Savitha K Avarasang | Aravinda Kuplikar
KANTESH CREATIONS
Please book by text msg
Narayana - 0423634979 Sudarshan 0414992528
or email sugamakannada@yahoo.com.au

ವಿಜ್ಞಾನ

ಶಕ್ತಿವಂತ ವಾಯು

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ಚೂಪಿಲ್ಲದ ಗಟ್ಟಿಯಾದ ಕುಡಿಯುವ ಸ್ಟ್ರಾಗಳು (ಪ್ಲಾಸ್ಟಿಕ್)
- ಒಂದು ಆಲೂಗಡ್ಡೆ

ವಿಧಾನ:

- ಕೈನಲ್ಲಿ ಪ್ಲಾಸ್ಟಿಕ್ ಸ್ಟ್ರಾ ಹಿಡಿದು (ಮೇಲ್ತುದಿ ಮುಚ್ಚದಂತೆ), ಆಲೂಗಡ್ಡೆಯನ್ನು ಚುಚ್ಚಲು ಪ್ರಯತ್ನಿಸಿ. ಏನಾಗುತ್ತದೆ ಎಂಬುದನ್ನು ಗಮನಿಸಿ.
- ಈಗ ಇನ್ನೊಂದು ಸ್ಟ್ರಾ ತೆಗೆದುಕೊಂಡು ಮತ್ತೊಮ್ಮೆ ಆಲೂಗಡ್ಡೆಯನ್ನು ಚುಚ್ಚಲು ಪ್ರಯತ್ನಿಸಿ. ಆದರೆ ಈ ಸಲ, ಚುಚ್ಚುವುದಕ್ಕೆ ಮೊದಲು ನಿಮ್ಮ ಹೆಬ್ಬೆರಳು ಸ್ಟ್ರಾ ತುದಿಯನ್ನು ಮುಚ್ಚಿರಲಿ. ಈಗೇನಾಗುತ್ತದೆ ಎಂದು ಗಮನಿಸಿ

ಏನಾಗುತ್ತಿದೆ:

ಹೆಬ್ಬೆರಳಿಂದ ಸ್ಟ್ರಾ ಮುಚ್ಚಿ ಚುಚ್ಚುವುದರಿಂದ ಆಲೂಗಡ್ಡೆಯನ್ನು ತಿವಿಯುವುದು ಸುಲಭವಾಗುವುದು ಮತ್ತು ಮತ್ತಷ್ಟು ಆಳಕ್ಕೆ ಹೋಗಬಹುದು ಎನ್ನುವುದನ್ನು ನೀವು ಅರಿಯುವಿರಿ. (ಸ್ಟ್ರಾ ಆಲೂಗಡ್ಡೆಯನ್ನು ಮತ್ತಷ್ಟು ಆಳವಾಗಿ ಚುಚ್ಚಲು ಸಾಧ್ಯವಾಗುತ್ತದೆ.) ಹೆಬ್ಬೆರಳು ಮುಚ್ಚದೇ ತಿವಿದಾಗ ಸ್ವಲ್ಪ ಆಳವಾಗಿ ಮಾತ್ರ ಚುಚ್ಚಲು ಸಾಧ್ಯವಾಗಿರುತ್ತದೆ ಎನ್ನುವುದನ್ನೂ ನೀವು ಕಾಣಬಹುದು.

ಹೆಬ್ಬೆರೆಳು ಮುಚ್ಚುವುದರಿಂದ, ಒಳಗಿರುವ ಗಾಳಿಯು ಬಂಧಿಯಾಗುತ್ತದೆ ಮತ್ತು ನೀವು ಆಲೂಗಡ್ಡೆಯನ್ನು ಚುಚ್ಚಿದಂತೆ ಗಾಳಿಯು ಕುಗ್ಗಿ ಮತ್ತಷ್ಟು ಒತ್ತಾಗುತ್ತದೆ (compress). ಮತ್ತು ಇದು ಸ್ಟ್ರಾ ಮೇಲೆ ನೀವು ಹಾಕುತ್ತಿರುವ ಒತ್ತಡದ ಜೊತೆಗೆ ಕೆಲಸಮಾಡಿ, ಮತ್ತಷ್ಟು ಆಳಕ್ಕೆ ಸ್ಟ್ರಾವನ್ನು ತಳ್ಳುತ್ತದೆ. ಹೆಬ್ಬೆರಳು ಮುಚ್ಚದೇ ಮಾಡಿದಲ್ಲಿ, ಗಾಳಿಯು ಸ್ಟ್ರಾ ಆಚೆಗೆ ಹೋಗಿ ಬರೀ ನೀವು ಹಾಕುವ ಒತ್ತಡದಷ್ಟು ಮಾತ್ರ ಒಳಕ್ಕೆ ಹೋಗುತ್ತದೆ.

ಗಾಳಿಯ ಒತ್ತಡವನ್ನು (air pressure) ಉಪಯೋಗಿಸಿ ಹಲವಾರು ಯಂತ್ರೋಪಕರಣಗಳನ್ನು ನೀವು ದಿನನಿತ್ಯದ ಬಳಕೆಯಲ್ಲಿ ಕಾಣಬಹುದು. ನಿಮ್ಮ ಸುತ್ತಮುತ್ತ ಕಣ್ಣಾಡಿಸಿ ನೋಡಿ, ಕೇಳಿ ತಿಳಿದುಕೊಳ್ಳಿ, ನಿಮಗೇ ತಿಳಿಯುವುದು ವಾಯು ಎಷ್ಟು ಶಕ್ತಿವಂತನೆಂದು. ▪

ಜಾಣ ಕರ್ನಾಟಕ – ಉತ್ತರ

೧. ಬಿ.ಡಿ. ಜತ್ತಿ - ಬಸಪ್ಪ ದಾನಪ್ಪ ಜತ್ತಿ

೨. ಹೆಚ್. ಎ .ಎಲ್ (ಭಾರತೀಯ ವಿಮಾನ ಕಾರ್ಖಾನೆ) ಮತ್ತು ಎ.ಡಿ.ಇ (Aeronautical Development Establishment)

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ದಾಸವಾಣಿ concert by Sri Ananth Kulkarni-15/08/2015 6PM

Wattle Grove Public School, 19 Cressbrook Drive, Wattle Grove

Contact for Programme Details and Sponsorship

Sridhar Kumsy	9672-8485	0405 508 802
Jagannath Rao	8840-9733	0407 547 815
Kanakapura Narayana		0423 634 979
Sudheendra Rao	9621-5501	0415 291 723
Vijayendra Rao		043 0182 234

ಪ್ರಶಸ್ತಿ ವಿಜೇತ ಕಲಾತ್ಮಕ ಕನ್ನಡ ಚಿತ್ರ

"ನಾನು ಅವನಲ್ಲ ಅವಳು" ಸಿಡ್ನಿಯಲ್ಲಿ ಪ್ರದರ್ಶನ

"ಸಂಚಾರಿ ವಿಜಯ್" ಅಭಿನಯಕ್ಕೆ ಅತ್ಯುತ್ತಮ ನಟ ರಾಷ್ಟ್ರ ಪ್ರಶಸ್ತಿ ಗಳಿಸಿರುವ ಚಿತ್ರ

Event Cinemas Liverpool

Sunday 30th Aug 2015 3 PM

Please text msg for your booking

ನಾರಾಯಣ - 0423634979

ಸುದರ್ಶನ್ - 0414992528

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.